ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೬—೧೧—೧೯೩೮.

ಸಂಪುಟ ೧೮] [ಸಂಚಿಕೆ ೪೬

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund
1931	2,16,82,430	2,91,880	33,24,809
1933	3,07,98,435	3,54,003	50,04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

18

Bombay Life Building Udipi	Gautam Nivas Charni Road Girgaum Bombay-4	Visweswarapuram Circle, Bangalore City	Puthiyara. Calicut	Car Street. Mangalore	Ottapalam S. Malabar.	Central Station Road. Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

Advances on GOLD & OTHER VALUABLE SECURITIES are granted at all our Branches.

DEPOSITS for varying periods are accepted at the following rates:—

3 months	2½% p. a.
6 & 9 months	3 % p. a
12 & 24 months	3½% p. a.
SHORT TERM	2 % p a.
SAVINGS BANK ACCOUNT	2½% p. a.

BANKING BUSINESS OF EVERY DESCRIPTION UNDERTAKEN.

Udipi,
10th Dec. 1938.

52-1

V. R. Karanth, B. A., LL. B.,
Manager.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂಪಡೆಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ಜಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟ್ಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟ್ಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural & Industrial Bank Ltd

52-28

"ZANDU" ಝಂಡೂರವರೆ	ಝಂಡೂರವರ
ಕೇಸರಿ ಚೀವನ್ ಇದು ಎಲ್ಲಾ ತರದ ಆಶಕ್ತತೆಗೆ ದಿವ್ಯವಾದ ಔಷಧ.	**ದ್ರಾಕ್ಷಾಸವ** ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.
ಝಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.	

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-18) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ್ರ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೨ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೪,೦೧,೭೩೮—೭—೦
ಏಜಂಟರಿಗೆ ಸಾಲ ಮುಪ್ಪತ್ತು ಅಸ್ತಿಯ ಒತ್ತೆ	೩೦,೨೩೮—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೯೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೫೭—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡ್ಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೪೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯ ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.
ಆಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-12

ಬಡಿದರೆ ಮೃದು ಸ್ವರ ಹೊರಡುತ್ತೆ ತಲೆಯಿಂದ.

ಪ್ರೊ. ಚೀರ್–ಕ್ಲಿಲೋಫ್ಲೋನ್ ತಲೆಯುಳ್ಳ ಮನುಷ್ಯ ಎಂದು ಹೆಸರುವಾಸಿಯಾದವನೊಬ್ಬನು–ಸಿಂಹಳ ದ್ವೀಪಕ್ಕೆ ಬಂದಿದ್ದಾನಂತೆ. ಕಿವಿ ಹಿಂಡಿದರೇನೇ ಸಂಕು, ಬುರುಡೆಯೊಳಗಿಂದ ಮೃದು ಮಧುರವಾದ ನಾದ ಹೊರಡುತ್ತದೆ. ತಲೆಯೊಳಗಿನ ಮೂಂಸಖಂಡಗಳ ಅಲುಗುನಿಕೆಯೂ, ಹಾಡಿನಲೆಗಳನ್ನು ಹೊರಡಿಸುವುದು. ಬಡಿಗೆಯಿಂದ ಜಲತರಂಗ ಬಾರಿಸುವಂತೆ ಅವನ ತಲೆಯನ್ನು ಬಡಿಮು ಯಾವುದಾದರೊಂದು ರಾಗವನ್ನು, ಕೃತಿಯನ್ನು ನುಡಿಸಬಹುದು!

—೦೦—

ಅಭಿನವ ವಿಶ್ವಾಮಿತ್ರ ಸೃಷ್ಟಿ.

ಸಿಡ್ನಿ ವಿಶ್ವವಿದ್ಯಾನಿಲಯದ ಪ್ರಯೋಗಾತ್ಮಕ ಭೌತಶಾಸ್ತ್ರ ಪ್ರವೀಣರಾದ ಪ್ರೊ. ವಿ. ಎ. ಬೈಲಿಯವರು ಅಭಿನವ ವಿಶ್ವಾಮಿತ್ರರಾಗಿ 'ಅನ್ಯಚಂದ್ರಂ ಕರಿಷ್ಯಾಮಿ' ಎಂದು ಪ್ರತಿಜ್ಞೆ ಮಾಡಿದ್ದಾರೆ. ಈ ಚಂದ್ರನಿಂದ ಹೊಂಟ ಚಂದ್ರಕೆ ಅಥವಾ ಬೆಳ್ದಿಂಗಳು 5,000 ಚದರ ಮೈಲಿನಷ್ಟು ಪ್ರದೇಶವನ್ನು ಬೆಳಗುವುದಂತೆ. ಪ್ರೊ. ಬೈಲಿಯವರ ಹಂಚಿಕೆಯಿಷ–ಭೂಮಟ್ಟಕ್ಕೆ 60 ಮೈಲಿ ಎತ್ತರದ ಪ್ರದೇಶದಲ್ಲಿ ಬೃಹದ್ವಿದ್ಯುತ್ ಪ್ರಸಾರಣೆ ಮಾಡುವುದು. ಪಾದರಸ ಮತ್ತು ಇತರ ಅನಿಲಗಳ ದೀಪಗಳ್ ನಿಯಾನ್ ನಂಳ (ಕೊಳವಿ)ಗಳ ಮೂಲಕ ಪ್ರಭೆಯನ್ನು ಬೀರುವ ತತ್ವವನ್ನೇ ಅವರೂ ಅನುಸರಿಸುವರು. ಹೀಗೆ ಮಾಡಿದಾಗ ಚಂದ್ರಿಕೆಯಂತೆಯೇ ಸೊಗಸಾದ ಬೆಳಕು ಭೂಮಿಯ ಮೇಲೆ ಬೀಳುವುದು. ಚಂದ್ರನಿಗಿಂತ ಈ ವಿದ್ಯುತ್ತು ಭೂಮಿಗೆ ಹೆಚ್ಚು ಸಮೀಪವಾಗಿದ್ದು ಬೆಳಗಿದ ಮೋಡಗಳ ಮೂಲಕ ಪ್ರಭೆಯ ಚಂದ್ರಿಕೆಗಿಂತ ಹತ್ತರಷ್ಟು ತೀವ್ರ ಪ್ರಭೆಯಿಂದ ಕೂಡಿರುವುದು. ಇದು ಹೆಚ್ಚು ಕಡಿಮೆ ಕೃತಕ ಭೂಕಾಂತ ಧ್ರುವ ಪ್ರಭೆ (aurora) ಯಂತಿದ್ದು, ಅದರಲ್ಲಿ ಕೆಲಮಟ್ಟಿಗೆ ಪಾಟುವರ್ಣ ಹೆಚ್ಚಿರಬಹುದು!

—೦೦—

ಮೊಟ್ಟೆಗಳ ಸೇತುವೆ.

ಜೆಕೋಸ್ಲೋವೇಕಿಯಾದಲ್ಲಿರುವ 'ಚಾರೆಸ್ ಬ್ರಿಡ್ಜ್' ಎಂಬ ಸೇತುವೆಯನ್ನು ಕಟ್ಟಲು 143 ವರ್ಷಗಳು ಹಿಡಿಯಿತು. ಯಾವ ಸೇತುವೆಯನ್ನು ಕಟ್ಟಲೂ ಇಷ್ಟು ದೀರ್ಘ ಕಾಲ ಹಿಡಿಯಲಿಲ್ಲ. ಗಾರೆ ಜೊತೆಗೆ 202 ಗಾಡಿ ಕೋಳಿ ಮೊಟ್ಟೆಗಳು ಬೆರೆಸಲ್ಪಟ್ಟವು. ಬೋರಿಯಾದ ಪ್ರತಿ ಪಟ್ಣವು ಒಂದೊಂದು ಗಾಡಿ ಮೊಟ್ಟೆ ಸರಬರಾಯಿ ಮಾಡಿತು. ಹೇಗಿದೆ ಸೇತುವೆ ಬಂದೋಬಸ್ತು! ನಮ್ಮೂರಲ್ಲಾದರೋ ಪ್ರತಿ ವರ್ಷವೂ ಸೇತುವೆ ರಿಪೇರಿ!!

—೦೦—

ನೀರುಳ್ಳಿ ಬೆಳ್ಳುಳ್ಳಿಗೆ ಪಾಶ್ಚಾತ್ಯ ಪುರಸ್ಕಾರ!

ಲೋವೆಲ್ ಎಂಬವರೊಬ್ಬರು ನೀರುಳ್ಳಿ ಬೆಳ್ಳುಳ್ಳಿಗಳ ಬಗ್ಗೆ ಅನೇಕಾನೇಕ ಪ್ರಯೋಗಗಳನ್ನು ನಡೆಸಿ ಈ ಗಡ್ಡೆಗಳಿಂದ ಹೊಂಡುವ ವಾಸನೆಯು ಅಡಿಗೆಗೆ ಉಪಯೋಗಿಸುವ ಪದಾರ್ಥಗಳ ರೋಗ ಪ್ರಜೋವ ಕ್ರಿಮಿಗಳನ್ನು ಕೊಲ್ಲಬಲ್ಲದೆಂದೂ, ಅರೆಯಲ್ಪಟ್ಟ ನೀರುಳ್ಳಿಯ ವಾಸನೆಯು ಸುಮಾರು ಹತ್ತು ನಿಮಿಷಗಳ ವರೆಗೂ, ಬೆಳ್ಳುಳ್ಳಿಯ ವಾಸನೆಯು ಎರಡು ಗಂಟೆಗಳ ವರೆಗೂ ಇರುವುದೆಂದೂ ಸಿದ್ಧಾಂತ ಮಾಡಿದ್ದಾರೆ!

ಈ ಸಿದ್ಧಾಂತವಾಗಲೀ, ಬೆಳ್ಳುಳ್ಳಿ, ನೀರುಳ್ಳಿಯ ಉಪಯೋಗವಾಗಲೀ ನಮ್ಮ ಜನರಿಗೆ ಹೊಸದಲ್ಲ!

ವಿವಿಧ ವಿಚಾರ.

ವಾಮನರ ಸಾಮ್ರಾಜ್ಯ.

ವಿಶ್ವದಲ್ಲೆಲ್ಲಾ ವಾಸಿಸುತ್ತಿರುವ ವಾಮನರ ಸಂಖ್ಯೆ 56,000. ಇವರೆಲ್ಲರೂ ಬಂದಿರಲು ಒಂದು ವಾಸಸ್ಥಾನವನ್ನು ಕಲ್ಪಿಸಿದಲ್ಲಿ ಅವರದೇ ಒಂದು ವಿಶ್ವವಾಗುವುದಿಲ್ಲವೇ? ಈ ಯೋಚನೆಯು ಹಂಗೇರಿಯಲ್ಲಿನ ಬುಡಾಪೆಸ್ಟಿನ ಜ್ಯೂಲಿಯಸ್ ಗಾಂಟ್ ಎಂಬ 2 ಅಡಿ 8 ಅಂಗುಲದ ಪುಟ್ಟ ವ್ಯಾಪಾರಿಯ ಮನಸ್ಸಿಗೆ ಬಂದಿದೆ. ಬುಡಾಪೆಸ್ಟ್‌ನಲ್ಲಿರುವ ಅವನ ಅಂಗಡಿಯು ಕುಳ್ಳರಿಗೆ ಮಾತ್ರವೆಂದೇ ತೆರೆಯಲಾಗಿದೆ. ಆ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ಕುಳ್ಳರೇ. ಅವರವರ ಎತ್ತರಕ್ಕನುಗುಣವಾಗಿ ನಿರ್ಮಿತವಾಗಿರುವ ಕುರ್ಚಿ, ಮೇಜು ಮೊದಲಾದವುಗಳನ್ನು ನೋಡಿದರೆ ಅದು ಆಟದ ಬೊಂಬೆಯ ಗೃಹವೆಂದು ಕಾಣುವುದು. ಜಗತ್ತಿನಲ್ಲೆಲ್ಲಾ ಹೆಚ್ಚು ಕುಳ್ಳರು ವಾಸಿಸುವ ದೇಶ ಹಂಗೇರಿ. ಕುಳ್ಳ ಮಕ್ಕಳನ್ನು ಸರ್ಕಸಿನಲ್ಲಿ ಸೇರಿಸಿ ಅಪಾರ ಆಸ್ತಿಯನ್ನು ಸಂಪಾದಿಸಬಹುದೆಂಬ ಅಮಾನುಷ ಮಾತೆಯರ ದುರಾಶೆಯೇ ಅಲ್ಲಿಯ ಕುಳ್ಳ ಜನಾಂಗಕ್ಕೆ ಕಾರಣ. ಜ್ಯೂಲಿಯಸ್ ಗಾಂಟರು ಹಂಗೇರಿಯದ ಫಲಪತ್ತಾದ ಕ್ಷೇತ್ರ ಒಂದರಲ್ಲಿ 'ವಾಮನರ ವಿಶ್ವ'ವನ್ನೇ ಸ್ಥಾಪಿಸಬೇಕೆಂದಿರುವ ಯೋಚನೆಯು ಬಹಳ ಉತ್ತಮವಾಗಿದೆ. ಅಲ್ಲಿ ಕುಳ್ಳರು ಕುಳ್ಳರೊಂದಿಗೆ ಸರಿಸಮಾನಸ್ಕಂಧತೆಯಿಂದ ವಾಸಿಸಬಹುದು.

—೦೦—

ಪುರುಷರ ಪ್ರಪಂಚ.

ಮೌಂಟ್ ಏಥಾಸ್ ಎಂಬುದು ಗ್ರೀಸ್‌ನಲ್ಲಿನ ಒಂದು ದ್ವೀಪಕಲ್ಪ. ಅಲ್ಲಿ ಪ್ರಪಂಚದಲ್ಲಿ ಎಲ್ಲಿಯೂ ಕಾಣದ ವೈಚಿತ್ರ್ಯವು ಕಂಡುಬರುವುದು. ಆಲ್ಲಿಯ ಸರ್ಕಾರವು ನಿರಾತಂಕವಾಗಿ ರಾಜ್ಯಭಾರ ನಡೆಸಿದಷ್ಟು ಕಾಲ ಮತ್ತಾವ ಸರ್ಕಾರವೂ ನಡೆಸಿಲ್ಲ. ಈ ರಾಷ್ಟ್ರವು ನಿರ್ಮಾಣವಾದದ್ದು 10 ನೇ ಶತಮಾನದಲ್ಲಿ. ಅಲ್ಲಿಯ ಜನಸಂಖ್ಯೆ 7,000. ಅವರಲ್ಲಿ 3,000 ಸನ್ಯಾಸಿಗಳು. 4,000 ಸನ್ಯಾಸಿಗಳಲ್ಲದವರು. ಅವರೆಲ್ಲರೂ ಪುರುಷರೇ. ಆ ರಾಷ್ಟ್ರ ಸ್ಥಾಪನಾಚಾರ್ಯರ ಕಾಲದ ಭವನಗಳಲ್ಲೇ ಇಂದಿನ ವರೆಗೂ ವಾಸಿಸುತ್ತಿರುವುದು. ಆ ಕಾಲದ ಗರಿಯ ಪುಸ್ತಕಗಳನ್ನೇ ಈಗಿನವರೂ ಉಪಯೋಗಿಸುತ್ತಿರುವರು. ಅದೇ ಹತ್ತನೇ ಶತಮಾನದ ಜೀವನವೂ, ಪೋಷಾಕೂ ಇಂದಿಗೂ ಆಚರಣೆಯಲ್ಲಿರುವುದು ಆಶ್ಚರ್ಯಕರವಲ್ಲವೇ? ಇದಕ್ಕಿಂತಲೂ ಆಶ್ಚರ್ಯಕರವಾದುದೆಂದರೆ ಅಲ್ಲಿ ಒಂದು ಸ್ತ್ರೀ ಪಿಳ್ಳೆಯೂ ಇಲ್ಲದಿರುವುದು! ಆ ದ್ವೀಪಕಲ್ಪಕ್ಕೆ ಭೇಟಿಯಿತ್ತ ಪ್ರಥಮ ಸ್ತ್ರೀಯು ಸೈಬೀರಿಯದ ರಾಣಿ. ಅದು 1345 ರಲ್ಲಿ ನಡೆದದ್ದು. ಅಲ್ಲಿಗೆ ಭೇಟಿಯಿತ್ತ ಎರಡನೆಯವಳೂ ಮತ್ತು ಕಡೆಯ ಸ್ತ್ರೀಯೂ ಎಂದರೆ ರುಮೇನಿಯದ ರಾಣಿ ಎಲಿಜಬೆತ್ ಎಂಬಾಕೆ. ಆಕೆ ಅಲ್ಲಿ ಇದ್ದದ್ದು 15 ನಿಮಿಷಗಳು ಮಾತ್ರ. 'ಸ್ತ್ರೀಯರಾಗಲೀ ತೋಳಗಳಾಗಲೀ' ಅತಿಕ್ರಮ ಪ್ರವೇಶ ಮಾಡಿಯಾವೆಂಬು ಗಡಿ ಪ್ರದೇಶಗಳಲ್ಲಿ ವಿಶೇಷ ಪೊಲೀಸ್ ಅಧಿಕಾರಿಗಳನ್ನು ಕಾವಲಿಡಲಾಗಿದೆ. ಅಲ್ಲಿಗೆ ಪ್ರವೇಶವಿಲ್ಲದಿರುವುದು ಸ್ತ್ರೀಯರಿಗೆ ಮಾತ್ರವಲ್ಲ, ಯಾವದೇ ಜಾತಿಯ ಸ್ತ್ರೀಲಿಂಗ ಜಾತಿಗೂ ಕೂಡ ಪ್ರವೇಶವಿಲ್ಲ. ಅಲ್ಲಿ ಹೋರಿ, ಹುಂಜಗಳೇ ಮೊದಲಾದ ಪುಲ್ಲಿಂಗ ಜೀವಕ್ಕೆ ಸ್ಥಳ ದೊರಕೀತು. ಕೋಳಿ, ಹಸುಗಳಿಗೆ ಸುತರಾಂ ಸ್ಥಳವಿಲ್ಲವಂತೆ. ಹೇಗಿದೆ ಈ ವಿಶ್ವದ ವೈಚಿತ್ರ್ಯ! ಹೀಗೆ ಪ್ರಪಂಚವೆಲ್ಲಾ ಈ ತ್ಯಾಗವನ್ನು ಕೈಕೊಂಡರೆ ಮುಂದಕ್ಕೆ ಕಾನೇಸುವಾರಿ ಲಿಕ್ಕಕ್ಕೆ ಸರ್ಕಾರಕ್ಕೆ ತೊಂದರೆಯುಂಟೇ?

ಕಾನೂನುಗಳ ಸ್ಫುರಿಮುಳೆ.

ಅಮೇರಿಕೆಯ ಕೆಲವು ಕಾನೂನುಗಳನ್ನು ಕಂಡರೆ ನೀವು ನಗಬಹುದು. ಆದರೆ ಅವು ಬ್ರಿಟನ್ನಿನ ಕಾನೂನುಗಳ ರೀತಿಯದಲ್ಲವೆಂದು ಕಂಡಿತ ನುಡಿಯಬಹುದು. ಈ ಕಾನೂನುಗಳಿಗೆ ವಿರೋಧ ವರ್ತಿಸಿದರೆ, ಸಜೆಯೂ ಇದ್ದೆ ಇದೆ. ಓಹಿಯೋದಲ್ಲಿ, ರಾತ್ರೆ ಹೊತ್ತು ಹೊರಗೆ ಹೋಗುವ ಬೆಕ್ಕುಗಳಿಗೆ ಅವುಗಳ ಯಜಮಾನರು–ಅವುಗಳ ಬಾಲಕ್ಕೆ ಕೆಂಪು ದೀಪ ಕಟ್ಟಬೇಕು. ಬೋಸ್ಟನ್‌ನಲ್ಲಿ 'ಪಿಟೀಲು' ಬಾರಿಸುವುದೂ, ಒಂದು ಆಡಿಗಿಂತ ಎತ್ತರದ ನಾಯಿಯನ್ನು ಸಾಕುವುದೂ ನ್ಯಾಯವಿರುದ್ಧ. ಸೆಂಟ್ರಾಲೀ ಎಂಬ ಚಿಕ್ಕ ನಗರದಲ್ಲಿ ಗಂಡಸರು ಗಡ್ಡ ಬೆಳೆಸಲೇ ಬೇಕು. ದಕ್ಷಿಣ ಕೆಲಿಫೋರ್ನಿಯಾದಲ್ಲಿ ವಿವಾಲ್ವರ್ ಕಿಸೆಯಲ್ಲಿಟ್ಟುಕೊಂಡಿದ್ದವರಿಗೆ ಇಗರ್ಜಿಗೆ ಪ್ರವೇಶವಿಲ್ಲ. ಲಾಸ್ ಎಂಟಿಲೆಸ್‌ನಲ್ಲಿ ಮೀಸೆ ಬೆಳೆಸಲೇ ಕೂಡದು. ವರ್ಜೀನಿಯಾದಲ್ಲಿ ಮನೆಯೊಳಗೆ ಸ್ನಾನ ಮಾಡಕೂಡದು. ಕೆಲಿಫೋರ್ನಿಯಾದಲ್ಲಿ ತಿಮಿಂಗಿಲಗಳನ್ನಲ್ಲದೆ ಇತರ ಪ್ರಾಣಿಗಳನ್ನು ಕಾರು ಅಥವಾ ಎರೋಪ್ಲೇನ್‌ನಲ್ಲಿ ಹಾರಾಡಿ ಬೇಟೆಯಾಡಬಾರದು. ನೋಡಿ ಕಾನೂನುಗಳ ಬಿಗಿ!

—೦೦—

ಸುಳ್ಳು.

ಕವಿಗಳು ಪ್ರೇಮಮಯ ಸಂಸಾರ, ಪ್ರೇಮ–ಪ್ರಣಯ ಚೇಷ್ಟೆ, ದಂಪತಿಗಳ ಸರಸ ಸಲ್ಲಾಪ ವಿವಿಧ ವಿನೋದಗಳನ್ನು ಬಣ್ಣಿಸಿ, ಸತ್ಯಾಸಿಯೂ ಸಂಸಾರಿಯೂಗುವಂತೆ ಮಾಡಬಲ್ಲರು. ಆದರೆ ಇದು ವರೆಗೆ ಅದಾವ ಕವಿಯೂ, ಸುಖ ಸಂಸಾರದ ಸವಿ ಸನಿವಾಸನೇ ಇಲ್ಲ. ಜಗತ್ತಿನಲ್ಲಿ ಮಕ್ಕಳ ಏಳಿಗೆಗಾಗಿ, ಮೇಲ್ಮೆಗಾಗಿ, ಉದ್ಧಾರಕ್ಕಾಗಿ ಹೆಣಗಾಡಿದವರಲ್ಲಿ ಹೆಚ್ಚಿನವರು ಮಕ್ಕಳಿಲ್ಲದವರು; ಬಾಲ ವಿಧವೆಯರು; ಬ್ರಹ್ಮಚಾರಿಗಳು. ಮಕ್ಕಳಿಲ್ಲದವರು ಅವರಿಗಾಗಿ ಅದಾವ ಕೆಲಸವನ್ನೂ ಮಾಡಿಲ್ಲ! ಲೇಖನ ಬರೆದು ಹೆಸರು ಗಳಿಸಿದವರಾಗಲೀ ಅಥವಾ ದೇಶಕ್ಕಾಗಿ ದುಡಿದು ಮಡಿದ ಅದಾವ ಲಲಿತಕಲಾ ಸೇವಕನೂ ಇದು ವರೆಗೆ ತನ್ನ ಹೆಸರನ್ನಲ್ಲದೆ, ಧನವನ್ನು ಬಿಟ್ಟು ಹೋಗಿಲ್ಲ. ಧರ್ಮೋಪದೇಶಿ ಅಧರ್ಮವನ್ನೂ, ನ್ಯಾಯಬೋಧಕನು ಅನ್ಯಾಯವನ್ನೂ ಮಾಡದೆ ಇದ್ದವರು ಜಗತ್ತಿನಲ್ಲಿ ಇದು ವರೆಗೆ ಬಹಳ ಮಂದಿ ಜನಿಸಿಲ್ಲ. ಅಂತೆಯೇ ಸಂತತಿ ಪ್ರತಿಬಂಧಕವನ್ನು ಅನುಮೋದಿಸುವವರು ಎರಡು ಮಕ್ಕಳನ್ನು ಹೆತ್ತ ಅಥವಾ ಭ್ರೂಣಹತ್ಯ ಮಾಡಿಕೊಂಡ ನಿದರ್ಶನ ಅನೇಕವಿದೆ. ಅಂತೂ ಮಂಗಳವಾರವೆಂಬ ಹೆಸರಿದ್ದರೂ ಆಷ್ಟು ಅಮಂಗಳವೆಂದು ತಿಳಿದು ಬರುವಂತೆ ಈ ಜಗತ್ತೊಂದು ಸುಳ್ಳಿನ ಸಂತೆ!

—೦೦—

ಅದ್ಭುತ ಗೃಹ.

ಜಾಪಾನಿನ ಸೈನಿಕರು ನಿನ್‌ಕಿಂಗಿಗೆ ಪ್ರವೇಶಮಾಡಿದಾಗ ಅಲ್ಲಿ ಒಂದು ಅದ್ಭುತವಾದ ಮನೆಯನ್ನು ಕಂಡರು. ಒಡನೆಯೇ ಅದರೊಳಗೆ ಪ್ರವೇಶಿಸುವ ಪ್ರಯತ್ನ ನಡೆಸಿದರು. ಆದರೆ ಸಾಧ್ಯವಾಗಲಿಲ್ಲ. ಅದು ಕೇಂದ್ರ ರಾಜಕೀಯ ಶಾಲೆಯ ತಳಹದಿಯ ಮೇಲಿದೆ. ಪೂರ್ವಕಾಲದಲ್ಲಿ ಜನರಲ್ ಕೈಶೇಕರು ಆ ಶಾಲೆಯಲ್ಲಿ ರಾಜಕೀಯ ತತ್ವಗಳನ್ನು ಬೋಧಿಸುತ್ತಿದ್ದರು.

ಜಪಾನಿಯರು ಆ ಅದ್ಭುತ ಮನೆಯ ವಿಷಯವಾಗಿ ನಾನಾ ಅಭಿಪ್ರಾಯ ಪಡುತ್ತಿರುವರು. ಅವರಲ್ಲಿ ಶಿಂಡಮದ್ದಿನ ರಾಶಿಗಳಿರಬಹುದೆನ್ನುವರು ಕೆಲವರು. ಮತ್ತೆ ಹಲವರು ಅವರಲ್ಲಿ ಚೀನೀ ಹುಡುಗಿಯರು ಬೆದರಿ ಅವಿತಿರುವರೆನ್ನುವರು. ಅವರ ಬೀಗಗಳನ್ನು ಮುರಿಯಲು ಹಲವು ಕಮ್ಮಾರರು ಪ್ರಯತ್ನಿಸಿದರು. ಆದರೂ ನಿಷ್ಫಲ. ಮನೆ ಮುರಿಯುವ ತಜ್ಞರ ಸಾಹಸ ವಿಫಲವಾಗಿ ಮನೆಯು ಬಾಗಿಲು ಸ್ಥಿರವಾಗಿ ನಿಂತಿದೆ. ಅಬ್ಬಾ! ಆ ಪ್ರಾಚೀನೆಯ ಗಟ್ಟಿಯೇ! ನಮ್ಮವರ ಮನೆಯು ಒಟ್ಟಿನಂತೆ

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಅಪರಂಪರ.

Aparampara, the Old Pretender.

(ಲೇಖಕ:–ಡಿ. ಎನ್. ಕೃಷ್ಣಯ್ಯ, ಎಂ. ಎ. ಬಿ. ಇಡಿ.)

ಲೇಖಾಂಕ ೧೫

(ಎಲ್ಲಾ ಹಕ್ಕುಗಳನ್ನು ಕಾಯ್ದಿಡಲ್ಪಟ್ಟಿದೆ.)

ಕ್ರಿ. ಶ. 1835 ನೇ ಇಸವಿ. ಕೊಡಗಿನಲ್ಲಿ ಹಾಲೇರಿ ಅರಸರ ಆಳ್ವಿಕೆಯು ಕೊನೆಗಂಡು ಒಂದು ವರ್ಷವಾಗಿದೆ. ಕಂಪೆನಿಯ ರಾಜ್ಯಭಾರವು ಪ್ರಾರಂಭವಾಗಿದೆ. ವೀರರಾಜನು ಪತ್ನಿಪುತ್ರ ಸಮೇತರಾಗಿ ಕಾಶಿಗೆ ಕಳುಹಿಸಲ್ಪಟ್ಟಿದ್ದಾನೆ. ಕೊಡಗಿನಲ್ಲಿ ಹಾಲೇರಿ ಅರಸುಮನೆತನದ ಹಕ್ಕುದಾರರು ಯಾರೂ ಇದ್ದ ಹಾಗೆ ಕಂಡು ಬರಲಿಲ್ಲ. ದಾಯಾದಿಗಳು ಕೆಲಸರಿದ್ದವರನ್ನು ದೊಡ್ಡ ವೀರರಾಜನೂ ಚಿಕ್ಕ ವೀರರಾಜನೂ ಮೊದಲೇ ಕೊಲ್ಲಿಸಿದರು. ದೊಡ್ಡ ವೀರರಾಜನು ತನ್ನ ತಮ್ಮಂದಿರಲ್ಲಿ ಒಬ್ಬನಾದ ಅಪ್ಪಾಜಿ ಅರಸನನ್ನು ತಾನೇ ಕೊಲ್ಲಿಸಿದ್ದನು. ಇನ್ನೊಬ್ಬ ತಮ್ಮ ಲಿಂಗರಾಜನು ಹೇಗೋ ಉಳಿದುಕೊಂಡು ದೊಡ್ಡ ವೀರರಾಜನ ನಂತರ ರಾಜ್ಯವಾಳಿಸಿದನು. ಈತನ ಮರಣಾನಂತರ ಪಟ್ಟಕ್ಕೆ ಬಂದ ಚಿಕ್ಕ ವೀರರಾಜನು ಆ ಕೂಡಲೇ ಅಪ್ಪಾಜಿ ಅರಸನ ಪ್ರಾಯಕ್ಕೆ ಬಂದಿದ್ದ ಇಬ್ಬರು ಗಂಡು ಮಕ್ಕಳನ್ನು ಮಡಿಕೇರಿ ಅರಮನೆಯ ಹಿಂಭಾಗದಲ್ಲಿದ್ದ ಕೋಟೆಮನೆಯೆಂಬ ಕಟ್ಟಡದಲ್ಲಿ ಸೆರೆಯಲ್ಲಿಟ್ಟನು. ಈ ಗಂಡು ಮಕ್ಕಳ ಹೆಸರು ವೀರಪ್ಪ ಮತ್ತು ನಂಜುಂಡಪ್ಪ ಎಂದಾಗಿದ್ದತು. ಇವರಿಗೆ ಸೆರೆಮನೆಯಲ್ಲಿ ಸರಿಯಾಗಿ ಆಹಾರವು ಇರಲಿಲ್ಲ, ಆದರೆ ರಾಜನು ಬೇಕಾಪ ಹಾಗೆ ಇವರಿಗೆ ಹಿಂಸೆಯನ್ನು ಕೊಡುತ್ತಿದ್ದನು. ಇದರಿಂದ ವೀರಪ್ಪನೂ, ನಂಜುಂಡಪ್ಪನೂ ಇನ್ನು ಕೆಲವರೂ ಸೆರೆಮನೆಯನ್ನು ಸೇರಿ ಮೂರು ತಿಂಗಳುಗಳೊಳಗಾಗಿ ಸತ್ತು ಹೋದರು. ಇನ್ನುಳಿದ ಒಬ್ಬಿಬ್ಬರು ಚಿಕ್ಕ ಗಂಡು ಮಕ್ಕಳನ್ನು, ದೊಡ್ಡ ವೀರರಾಜನ ಹೆಣ್ಣು ಮಕ್ಕಳಾದ ದೇವಮ್ಮಾಜಿ, ನೀಲಮ್ಮಾಜಿಯರನ್ನೂ ಚಿಕ್ಕ ವೀರರಾಜನು 1834 ನೆ ಇಸವಿಯಲ್ಲಿ ಬ್ರಿಟಿಷರು ತಮ್ಮ ದಂಡನ್ನು ತೆಗೆದುಕೊಂಡು ಕೊಡಗಿಗೆ ಬರುವ ವರ್ತಮಾನವನ್ನು ಕೇಳಿ ಕೊಲ್ಲಿಸಿದನು. ಹೀಗಾಗಿ ಬ್ರಿಟಿಷರು ಕೊಡಗನ್ನು ಆಳುವುದಕ್ಕೆ ಪ್ರಾರಂಭಿಸುವಾಗ ರಾಜ್ಯಕ್ಕೆ ಹಾಲೇರಿ ಅರಸುಮನೆತನದ ಹಕ್ಕುದಾರರು ಯಾರೂ ಇರುವಂತೆ ಕಾಣಲಿಲ್ಲ.

ವೀರಪ್ಪನು ಸೆರೆಮನೆಯಲ್ಲಿ ತಾಯು ವಾಗ ಆತನ ಪತ್ನಿ ರಾಜಮ್ಮಾಜಿಗೆ ಏಳೆಂಟು ವರ್ಷ ಪ್ರಾಯವಾಗಿದ್ದತು. ಆಗ ಅವಳು ಹಾಲೇರಿ ಅರಮನೆಯಲ್ಲಿದ್ದಳು. ಆಕೆಯು ಆಗ ಬಹಳ ಚಿಕ್ಕವಳಾಗಿದ್ದುದರಿಂದ ತನ್ನ ಪತಿಯ ಮರಣದ ಸಂಗತಿಯು ಅವಳ ಮನಸ್ಸಿನಲ್ಲಿ ಅಷ್ಟು ಖಂಡಿತವಾಗಿರಲಿಲ್ಲ. ಅವಳು ಪ್ರಾಯಕ್ಕೆ ಬಂದ ನಂತರ ಅವಳಿಗೆ ತನ್ನ ಪತಿಯು ಸೆರೆಮನೆಯಲ್ಲಿ ಸಾಯಲಿಲ್ಲ. ಅಲ್ಲಿಂದ ತಪ್ಪಿಸಿಕೊಂಡು ಹೋಗಿರುವೆನೆಂಬ ನಂಬಿಗೆಯೇ ಹೆಚ್ಚು ಹೆಚ್ಚಾಗಿ ಮನಸ್ಸಿನಲ್ಲಿ ಬೇರೂರಿತು.

ಅದಕ್ಕೆ ಸರಿಯಾಗಿ ಕಂಪೆನಿಯವರು ಕೊಡಗಿಗೆ ದಂಡೆತ್ತಿ ಬಂದಾಗ ವೀರಪ್ಪನು ಕೊಡಗಿನ ಸಿಂಹಾಸನಕ್ಕೆ ತನ್ನ ಹಕ್ಕುದಾರಿಕೆಯನ್ನು ಸ್ಥಾಪಿಸುವುದಕ್ಕೆ ಕಂಪೆನಿದಂಡಿನೊಡನೆ ಬಂದಿರುವನೆಂತಲೂ, ಕಂಪೆನಿ ದಂಡಿನ ದೇರೆಗಳೊಡನೆ ಆತನ ದೇರೆಯು ಹಾಕಲ್ಪಟ್ಟಿತ್ತೆಂದೂ ವರ್ತಮಾನವು ಹರಡಿತು. ಇದಲ್ಲದೆ ಮಡಿಕೇರಿಯಲ್ಲಿ ವೀರಪ್ಪನು ಸೆರೆಯಲ್ಲಿದ್ದಾಗ ವೀರರಾಜನು ಆತನನ್ನು ಕೊಲ್ಲಬೇಕೆಂದು ಕಳುಹಿಸಿದ ಮನುಷ್ಯನು ವೀರಪ್ಪನನ್ನು ಕೊಲ್ಲದೆ ಆತನ ಕೈಯಲ್ಲಿ ಒಂದು ಗಾಯವನ್ನು ಮಾಡಿ ಆ ರಕ್ತದ ಕುರುಹನ್ನು ವೀರರಾಜನಿಗೆ ತೋರಿಸಿದನೆಂದೂ, ವೀರಪ್ಪನು ಆ ಸಮಯದಲ್ಲಿ ಮೈಸೂರು ದೇಶದ ಆವರ್ತಿಯೆಂಬ ಊರಿಗೆ ಓಡಿಹೋಗಿ ತನ್ನ ಕೈಗಾಯವನ್ನು ಗುಣಪಡಿಸಿಕೊಂಡನೆಂದೂ, ಆದ್ದರಿಂದ ವೀರಪ್ಪನು ಜೀವಂತನಾಗಿರುವನೆಂದೂ ವರ್ತಮಾನವು ಇದೇ ಸಮಯದಲ್ಲಿ ಮೊದಲನೆಯ ಸಾರಿ ಪ್ರಕಟವಾಯಿತು. ಈ ವಿಷಯವು ರಾಜನ ವರೆಗೂ ತಲಪಿ ಆತನು ಇದರ ನಿಜತ್ವವನ್ನು ತಿಳಿಯಲು ತನ್ನ ಗೂಢಚಾರರನ್ನು ಕಂಪೆನಿಯವರು ದಂಡು ಬಿಟ್ಟಲ್ಲಿಗೆ ಕಳುಹಿಸಿದ್ದನು.

ಇದಕ್ಕೆ ಮೊದಲು 1833 ರಲ್ಲಿ ಮುಂಜರಾಬಾದು ಜಿಲ್ಲೆಯಲ್ಲಿ ಒಬ್ಬ ಸನ್ಯಾಸಿ ಇರುವನು. ಆತನು ಅಸಾಧಾರಣ ಮನುಷ್ಯನು. ಅವನು ದಾಸರ ಪದಗಳ ಹಾಗಿರುವ ಕೀರ್ತನೆಗಳನ್ನು ಕಷ್ಟವಿಲ್ಲದೆ ರಚಿಸುವನು. ಆತನ ಸಂಗಡ ಅನೇಕ ಶಿಷ್ಯರು ಇರುವರು. ಎಂಬ ವರ್ತಮಾನವು ಹರಡಿ ಮಡಿಕೇರಿಯಲ್ಲಿದ್ದ ವೀರರಾಜನಿಗೂ ತಲಪಿತು. ಈ ಸನ್ಯಾಸಿಯು ರಚಿಸಿದ ಕೆಲವು ಪದಗಳು ರಾಜನ ಮುಂದೆ ಹಾಡಲ್ಪಟ್ಟವು. ಆಗ ರಾಜನಿಗೆ ಸನ್ಯಾಸಿಯನ್ನು ನೋಡಬೇಕೆಂಬ ಕುತೂಹಲವುಂಟಾಯಿತು. ಹಾಗೆ ರಾಜನ ಇಷ್ಟದ ಮೇರೆ ಈ ಸನ್ಯಾಸಿಯನ್ನು ಮುಂಜರಾಬಾದಿನಿಂದ ಮಡಿಕೇರಿಗೆ ಕರೆದುಕೊಂಡು ಬಂದರು. ಈತನ ಹೆಸರು ಅಪರಂಪರ. ಅಕಾರಪಲ್ಲಿ ಈತನು ಎತ್ತರವಾಗಿಯೂ, ದಪ್ಪವಾಗಿಯೂ ಬೆಳೆದಿದ್ದನು. ಇವನ ಪ್ರಕೃತಿಯನ್ನು ನೋಡಿದವರಿಗೆ ಇವನಲ್ಲಿ ಪೂಜ್ಯಭಾವನೆಯು ಹುಟ್ಟುತ್ತಿತ್ತು. ಈತನ ಉಡಿಗೆಯು ಬಹಳ ಸ್ವಲ್ಪವಾಗಿತ್ತು. ಗಡ್ಡವನ್ನು ಉದ್ದವಾಗಿ ಬೆಳೆಸಿಕೊಂಡಿದ್ದು ಮುಸಲ್ಮಾನ ಫಕೀರನಂತೆ ತೋರುತ್ತಿದ್ದನು. ಅವನ ಕುಲಗೋತ್ರಗಳನ್ನು ಯಾರಾದರೂ ವಿಚಾರಿಸಿದರೆ ಅವನು ಸ್ಪಷ್ಟವಾಗಿ ಯಾವ ಉತ್ತರಗಳನ್ನೂ ಕೊಡುತ್ತಿರಲಿಲ್ಲ. ಮಡಿಕೇರಿಯಲ್ಲಿ ರಾಜನಿಗೂ ಈ ಜಂಗಮನಿಗೂ ಈರೀತಿ ಪ್ರಶ್ನೋತ್ತರಗಳಾದವು.

ರಾಜ:–ನೀನು ಯಾರು?

ಸನ್ಯಾಸಿ:–ಒಬ್ಬ ಮನುಷ್ಯ.

ರಾಜ:–ನಿನ್ನ ಮನೆಯೆಲ್ಲಿ?

ಸನ್ಯಾಸಿ:–ಇಲ್ಲ.

ರಾಜ:–ನಿನ್ನ ತಾಯಿಯು ಯಾರು?

ಸನ್ಯಾಸಿ:–ಗರ್ಭಕೋಶ.

ಹೀಗೆ ರಾಜನು ಕೇಳಿದ್ದಕ್ಕೆಲ್ಲಾ ಈ ಸನ್ಯಾಸಿಯು ಚಿಕ್ಕ ಮತ್ತು ತಿರಸ್ಕಾರಯುಕ್ತವಾದ ಉತ್ತರಗಳನ್ನು ಕೊಡುತ್ತಾ ಬಂದನು. ರಾಜನಿಗೆ ಇದರಿಂದ ಸಿಟ್ಟು ಬಂದರೂ ಅವನನ್ನು ಶಿಕ್ಷಿಸುವುದಕ್ಕೆ ಹೆದರಿ ಬೇಗನೆ ಅವನನ್ನು ಹಿಂದಕ್ಕೆ ಕಳುಹಿಸಿದನು. ಆದರೆ ಆತನು ಹೋದ ನಂತರ ರಾಜನಿಗೆ ಅಪರಂಪರನನ್ನು ಶಿಕ್ಷಿಸದೆ ಬಿಟ್ಟದ್ದಕ್ಕೆ ಬೇಸರವಾಗಿ ತಿರಿಗಿ ಅವನನ್ನು ಕರೆದುಕೊಂಡು ಬರುವಂತೆ ಚಾರರನ್ನು ಕಳುಹಿಸಿದನು, ಆದರೆ ಅಷ್ಟರಲ್ಲಿ ಅಪರಂಪರನು ಕೊಡಗಿನ ಗಡಿಯನ್ನು ದಾಟಿದ್ದನು. ಈ ಚಾರರು ಅವನನ್ನು ತಿರಿಗಿ ಕೊಡಗಿಗೆ ಬರುವುದಕ್ಕೆ ಹೇಳಿದರೂ ಅವನು ಅದಕ್ಕೆ ಒಪ್ಪಲಿಲ್ಲ.

ಇದರ ನಂತರ ಅಪರಂಪರನು ಕಂಪೆನಿಯ ಸರ್ಕಾರವು ಕೊಡಗಿನಲ್ಲಿ ಸ್ಥಾಪನೆಯಾದ ನಂತರ ಎಂದರೆ 1835 ರ ಮಾರ್ಚಿ ತಿಂಗಳಲ್ಲಿ ಕೊಡಗಿನ ಉತ್ತರ ಭಾಗಕ್ಕೆ ಬಂದನು. ಆಗ ಈತನು ಅಪ್ಪಾಜಿ ಅರಸು ಮಗ ವೀರಪ್ಪ ಒಡೆಯನೇ ಎಂದು ಅನೇಕರು ನಂಬಿದರು. ಆದರೆ ವೀರಪ್ಪನನ್ನು ಮೊದಲು ನೋಡಿದ್ದವರು ಈ ಸನ್ಯಾಸಿಗೂ ವೀರಪ್ಪನಿಗೂ ಯಾವ ಹೋಲಿಕೆಯೂ ಇಲ್ಲವೆಂದರು. ಇನ್ನು ಕೆಲವರು ವೀರಪ್ಪನೇ ಈತನು. ಇವನಿಗೆ ಸಿಡುಬು ತಗಲಿ ರೂಪು ಕೆಟ್ಟಿದೆ ಎಂದರು. ಆದರೆ ಯಾರೊಡನೆಯೂ ಅಪರಂಪರನು ತಾನು ವೀರಪ್ಪನೆಂದು ಹೇಳಿಕೊಂಡಿರಲಿಲ್ಲ. ಯಾರಾದರೂ ಆತನೊಡನೆ ಈ ವಿಷಯವನ್ನು ಪ್ರಸ್ತಾಪಿಸಿದರೆ ಅಪರಂಪರನು ಅವನ್ನು ಅಲ್ಲಗಳೆಯುತ್ತಲಿದ್ದನು. ಆದರೂ ಅವನು ಉತ್ತರಕೊಡುವ ರೀತಿಯಿಂದ್ದ ಅವನಲ್ಲಿ ಏನೋ ಒಂದು ರಹಸ್ಯವಿದೆ. ಬಹುಶ: ಆತನು ವೀರಪ್ಪನೇ ಆಗಿರಬೇಕು ಎಂಬ ಸಂದೇಹವು ಕೇಳುವವರಿಗೆ ಬರುತ್ತಿತ್ತು. ಯಾರಾದರೂ ಅಪರಂಪರನ ಹೆಸರು, ವಾಸಸ್ಥಳಗಳನ್ನು ವಿಚಾರಿಸಿದರೆ ಆತನು ತಾನು ಒಬ್ಬ ಬಡ ಸನ್ಯಾಸಿ. ತಾನು ಯಾವ ಪ್ರಸಿದ್ಧ ಪುರುಷನೂ ಅಲ್ಲ. ತನ್ನನ್ನು ನೋಡುವುದಕ್ಕೆ ಬಂದವರ ಕೀಳು ಸೇವಕನು ಎಂದು ಮುಂತಾಗಿ ಉತ್ತರಗಳನ್ನು ಕೊಡುತ್ತಿದ್ದನು. ಇದರಿಂದ ಜನರಿಗೆ ಈತನು ಕೊಡಗಿನ ಸಿಂಹಾಸನಕ್ಕೆ ಹಕ್ಕುದಾರನೆಂದೆನ್ನಿಸಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ತಾನು ಬಹಳ ಸ್ವಾತ್ವಿಕನಾದ ಜಂಗಮನು ಎಂದೆನ್ನಿಸಿಕೊಳ್ಳಲು ಹವಣಿಸುವನು ಎಂಬ ಅಭಿಪ್ರಾಯವುಂಟಾಯಿತು.

ವಾಸ್ತವವಾಗಿ ಅಪರಂಪರನು ವೈಸೂರು ಸೀಮೆಯ ತುಮಕೂರು ಜಿಲ್ಲೆಯ ಮಾಯಸಂದ್ರ ತಾಲೋಕಿನ ಕಡಗನೂರು ಎಂಬ ಊರಿನವನು. ಈತನ ತಂದೆಯ ಹೆಸರು ಹನುಮಂತರಾಯ. ತಾಯಿಯು ಗೋಪಮ್ಮ ಎಂಬವಳು. ಈತನಿಗೆ ಹೆಂಡತಿಯೂ ಒಬ್ಬ ಮಗಳೂ ಇದ್ದರು. ಆದರೆ ಈತನು ತನ್ನ ಚಿಕ್ಕ ಪ್ರಾಯದಲ್ಲಿಯೇ ಊರನ್ನು ಬಿಟ್ಟು ಸನ್ಯಾಸಿಯಾದನು. ಆಗ ಈತನಿಗೆ ಕೇನಾರ್‌ಬಾವನೆಂದು ಹೆಸರಿತ್ತು. ಈತನ 1807 ರಲ್ಲಿ ತನ್ನ ಊರನ್ನು ಬಿಟ್ಟು ಸೋದಪನು ಇಪ್ಪತ್ತೈದು ವರ್ಷಗಳ ನಂತರ ಒಬ್ಬ ದೊಡ್ಡ ಜಂಗಮನಂತೆ ವೇಷತಾಳಿ ತಿರಿಗಿ ತನ್ನ ಊರಿಗೆ ಬಂದನು. ಆದರೆ ಆಗ ತಾನು ಆ ಊರಿನವನು ಎಂದು ಆತನು ತೋರಿಸಿಕೊಳ್ಳಲಿಲ್ಲ. ಮತ್ತು ತನ್ನ ತಂದೆ ತಾಯಿಗಳನ್ನೂ ತನ್ನ ಹೆತ್ತಿರ ಸೇರಗೊಡಲಿಲ್ಲ. ಸ್ವಲ್ಪ ದಿವಸಗಳಲ್ಲಿ ಆತನು ದೊಡ್ಡ ಗುರುವಂದೂ ಆ ಮನುಷ್ಯ ಕೃತ್ಯಗಳನ್ನು ಮಾಡಬಲ್ಲವನೆಂದೂ, ಜ್ಞಾನಶಕ್ತಿಯಿಂದ ಆ ಊರಿನ ಜನರ ಪೂರ್ವೋತ್ತರಗಳನ್ನು ಹೇಳಬಲ್ಲನೆಂದೂ ಪ್ರಸಿದ್ಧಿಯುಂಟಾಯಿತು. ಅಂದಿನಿಂದ ಆತನಿಗೆ ಅನೇಕ ಶಿಷ್ಯರು ಉಂಟಾದರು.

1835 ರಲ್ಲಿ ಅಪರಂಪರನು ಮುಂಜರಾಬಾದಿನಿಂದ ಹೊರಟು ಸುಬ್ರಮಣ್ಯಕ್ಕೆ ಬಂದನು. ಆಗ ಆತನ ಸಂಗಡ ಹದಿನೈದು ಇಪ್ಪತ್ತು ಜನ ಕೊಡಗಿನವರು ಇರುತ್ತಿದ್ದರು. ಇವರಿಗೆ ಆಹಾರ ಸಾಮಗ್ರಿಗಳನ್ನು, ಅಪರಂಪರನೇ ಒದಗಿಸುತ್ತಿದ್ದನು. ಈತನಿಗೆ ಕೊಡಗಿನಿಂದ ಒಂದು ಕುದುರೆ ಒಂದು ರೇಶ್ಮೆ ಕೌಡಿ ಮತ್ತು ಕೆಲವು ಇತರ ಬಹುಮಾನಗಳನ್ನು ಕಳುಹಿಸಿದ್ದರು. ಮತ್ತು ಹಾಲೇರಿ ಅರಮನೆಯಿಂದ ರಾಜಮ್ಮಾಜಿಯು ಈತನಿಗೆ ಒಂದು ಚಿನ್ನದ ಕುತ್ತಿಗೆ ಸರವನ್ನೂ ಕೊಟ್ಟ ವರ್ತಮಾನವೂ ಇತ್ತು. ಆದರೆ ರಾಜಮ್ಮಾಜಿಯನ್ನು ಸರ್ಕಾರದವರು ವಿಚಾರಿಸುವಾಗ ಅವಳು ತಾನು ಅಪರಂಪರನಿಗೆ ಚಿನ್ನದ ಸರವನ್ನು ಕೊಡಲಿಲ್ಲವೆಂದು ಹೇಳಿದಳು. ಕುದುರೆ ಮತ್ತು ಇತರ ಬಹುಮಾನಗಳನ್ನು ಅಚ್ಚು ಎಂಬ ಸುಭೆದಾರನು ಅಪರಂಬರನಿಗೆ ಬಹುಮಾನವಾಗಿ ಕಳುಹಿಸಿದ್ದನು. ಅಚ್ಚು ಸುಭೆದಾರನು ಪುತ್ತೂರಿನಲ್ಲಿದ್ದಾಗ ಆತನಿಗಾದ ಒಂದು ಗಾಯವನ್ನು ಅಪರಂಪರನು ಗುಣಪಡಿಸಿದ್ದನು. ಆ ಉಪಚಾರಕ್ಕೆ ಪ್ರತಿಯಾಗಿ ಅಚ್ಚು ಸುಭೆದಾರನು ಜಂಗಮ ಅಪರಂಪರನಿಗೆ ಈ ಬಹುಮಾನಗಳನ್ನು ಕಳುಹಿಸಿದ್ದನು.

ಕ್ಯಾಪ್ಟನ್ ಲೀಹಾರ್ಡಿ ಸಾಹೇಬನು ಅಪರಂಪರನ ವಿಷಯವನ್ನು ಕೊಡಗಿನ ದಿವಾನರೊಡನೆ ಕೇಳಲು ಅವರು ವಿಚಾರಿಸಿ ಅದು ಏನೂ ವಿಶೇಷದ್ದಲ್ಲ. ಅಪರಂಪರನ ಚಟುವಟಿಕೆಗಳಿಗೆ ಏನೂ ಪ್ರಾಮುಖ್ಯತೆ ಕೊಡದಿದ್ದರೆ ಅದು ತನ್ನಷ್ಟಕ್ಕೆ ಬಿಡಗಿ ಹೋಗುವುದು. ಎಂದು ಕ್ಯಾಪ್ಟನ್ ಲೀಹಾರ್ಡಿ ಸಾಹೇಬನಿಗೆ ಹೇಳಿದರು. ಆದರೂ ಲೀಹಾರ್ಡಿ ಸಾಹೇಬನು ಅಪರಂಪರನ ನಿಜ ಸ್ಥಿತಿಯನ್ನು ತಿಳಿಯಲು ಒಬ್ಬ ಸಂಬಿಗನ್ನು ಮನುಷ್ಯನನ್ನು ಕಳುಹಿಸಿದನು. ಆದರೆ ಆ ಮನುಷ್ಯನು ಸುಬ್ರಮಣ್ಯಕ್ಕೆ ತಲಪುವ ಮೊದಲೇ ಜಂಗಮ ಅಪರಂಪರನು ಸುಬ್ರಮಣ್ಯದಿಂದ ಮಂಗಳೂರು ಕಡೆಗೆ ಹೋದನೆಂಬ ಆತನಿಗೆ ತಿಳಿಯಿತು. ಅನಂತರ ಸ್ವಲ್ಪ ದಿವಸ ಅಪ

ರಂಪರನ ಸುಳುವೇ ಸಿಕ್ಕಲಿಲ್ಲ. ಆದರೆ ಅದೇ ವರ್ಷದ ಮೇ ತಿಂಗಳ ಆದಿ ಭಾಗದಲ್ಲಿ ಅಪರಂಪರನು ಕೊಡ್ಲಿಪೇಟೆಯಲ್ಲಿ ಕಾಣಿಸಿಕೊಂಡನು. ಅಲ್ಲಿ ಒಂದೆರಡು ದಿವಸಗಳಿದ್ದು ಸೋಮವಾರಪೇಟೆಗೆ ಬಂದನು. ಅಲ್ಲಿಂದ ಹಾರಂಗಿಗೆ ಬಂದು ಅಲ್ಲಿ ದಳವಾಯಿ ವೆಂಕಟಪ್ಪನ ಮನೆಯಲ್ಲಿ ಇಳಿದುಕೊಂಡನು. ಇಲ್ಲಿ ಕೆಲವು ದಿವಸಗಳಿದ್ದು ಅನಂತರ ಹಾಲೇರಿ ಅರಮನೆಗೆ ಬಂದನು. ಅಲ್ಲಿ ಅರಮನೆಯ ಹಿಂಬಾಗದಲ್ಲಿ ಕೋಟೆ ಮಲ್ಲಿಗೆ ಎಂಬ ಸಣ್ಣ ಮನೆಯಲ್ಲಿ ಇಳಿದುಕೊಂಡನು. ಇಲ್ಲಿ ಒಂದು ಹಗಲೂ, ಒಂದು ರಾತ್ರಿಯೂ ಇದ್ದು ಅನಂತರ ಆತನು ಮಡಿಕೇರಿಗೆ ಹೋಗಿ ಒಂದು ದಿವಸ ಅಲ್ಲಿದ್ದು ತಿರುಗಿ ಹಾಲೇರಿ ಅರಮನೆಗೆ ಬಂದನು. ಮಡಿಕೇರಿಗೆ ಅವನು ಹೋಗಿದ್ದಾಗ ಜನರು ಆತನು ರಾಜನ ಕಾಲದಲ್ಲಿ ಬಂದಿದ್ದ ವಿಚಿತ್ರ ಸನ್ಯಾಸಿಯೆಂದು ಆತನನ್ನು ಗುರುತಿಸಿದರು. ಹಾಲೇರಿ ಅರಮನೆಯಲ್ಲಿ ಅಪರಂಪರನಿಗೂ, ರಾಜಮ್ಮಾಜಿಗೂ ಯಾವ ಸಂಭಾಷಣೆಯೂ ನಡೆದಂತೆ ಕೇಳಲಿಲ್ಲ. ಬಹುಶಃ ಅಪರಂಪರನು ತಾನು ರಾಜಮ್ಮಾಜಿಯ ಗಂಡ ವೀರಪ್ಪ ಒಡೆಯನೆಂಬ ಭಾವನೆಯನ್ನು ಜನರಲ್ಲಿ ಬಲಪಡಿಸುವುದಕ್ಕೆ ಹಾಲೇರಿ ಅರಮನೆಗೆ ಹೋಗಿರಬೇಕು. ಇಲ್ಲದಿದ್ದರೆ ರಾಜಾ ಮಾರ್ಗದಿಂದ ಆರೇಳು ಮೈಲುಗಳ ದೂರವೆಲ್ಲ ದುರ್ಗಮವಾದ ಸ್ಥಳದಲ್ಲಿರುವ ಹಾಲೇರಿ ಅರಮನೆಗೆ ಅವನು ಹೋಗುವ ಉದ್ದೇಶವೇ ಇರಲಿಲ್ಲ. ಅಪರಂಪರನು ತಾನೇ ವೀರಪ್ಪ ಒಡೆಯನೆಂದು ಹೇಳಿಕೊಳ್ಳದೇ ಹೋದರೂ ಅವನ ಪರಿವಾರದವರು ಆತನು ವೀರಪ್ಪ ಒಡೆಯನೆಂದು ಹಾರಂಗಿಯ ದಳವಾಯಿ ವೆಂಕಟಪ್ಪನಿಗೂ, ಹಾಲೇರಿ ನಾಡಿನ ಸುಭೇದಾರ್ ಕುಟ್ಟಪ್ಪನಿಗೂ ಹೇಳಿದ್ದರು.

ಅಪರಂಪರನು ಹಾಲೇರಿ ಅರಮನೆಯಿಂದ ಹೊರಟು ದಳವಾಯಿ ವೆಂಕಟಪ್ಪನ ಮನೆಯಲ್ಲಿ ಒಂದು ದಿವಸವಿದ್ದು ಸೋಮವಾರಪೇಟೆಗೆ ಹೋದನು. ಅಲ್ಲಿ ಏಳು ದಿವಸಗಳಿದ್ದು ನಂತರ ಮಂಜರಾಬಾದು ಜಿಲ್ಲೆಯಲ್ಲಿರುವ ಕೆಂಚಮ್ಮನ ಹೊಸಕೋಟೆಯೆಂಬ ಊರಿಗೆ ಹೋದನು. ಸೋಮವಾರಪೇಟೆಯಲ್ಲಿ ಆತನು ಏನು ಮಾಡಿದನೆಂದು ತಿಳಿಯಲಿಲ್ಲ. ಅಲ್ಲಿ ಸುಭೇದಾರನಾಗಿದ್ದ ಪೆಯ್ಯಪ್ಪನೂ, ಪಾರ್ವತಿಗಾರನಾದ ದೊಡ್ಡೀ ಗೌಡನೂ ಅಪರಂಪರನನ್ನು ವೀರಪ್ಪ ಒಡೆಯನೆಂದು ನಂಬಿದ್ದರು. ದೊಡ್ಡೀ ಗೌಡನು ಅಪರಂಪರನಿಗೆ ಸ್ವಲ್ಪ ಹಣವನ್ನೂ ಕಾಣಿಕೆಯಾಗಿ ಕಳುಹಿಸಿದ್ದನು. ಆದುದರಿಂದ ಅವರಿಬ್ಬರೂ ಜಂಗಮ ಅಪರಂಪರನ ಕಾರ್ಯಜಾಲಗಳನ್ನು ಕುರಿತು ಯಾವ ವಿಷಯವನ್ನೂ ಲೀಹಾರ್ಡ್ ಸಾಹೇಬನಿಗೆ ತಿಳಿಸಿರಲಿಲ್ಲ. ಅಪರಂಪರನು ಕೊಡಗಿನ ಗಡಿಯನ್ನು ದಾಟುವ ವರೆಗೆ ಇವನ ಸಂಗಡ ಗಡಿನಾಡು, ಹಾಲೇರಿನಾಡು ಸುತ್ತು ಏಳು ಸಾವಿರ ಸೀಮೆಯ ಸುಮಾರು ಎಪ್ಪತ್ತು ಜನರು ಇದ್ದರು; ಗಡಿಯನ್ನು ದಾಟಿದ ಮೇಲೆ ಇವನ ಜೊತೆಯಲ್ಲಿ ಬರೇ ಸ್ವಲ್ಪತ್ತು ಜನರಿದ್ದರು.

ಕೆಂಚಮ್ಮನ ಹೊಸಕೋಟೆಯನ್ನು ಅಪರಂಪರನು ತಲಪಿದೊಡನೆ ಆತನ ಉದ್ದೇಶವು ಬಹಿರಂಗವಾಗಿ ವ್ಯಕ್ತವಾಯಿತು. ಅಲ್ಲಿ ಅವನು ತಾನೇ ಕೊಡಗಿನ ರಾಜನೆಂದು ಇಸ್ತಿಹಾರುಗಳನ್ನು ಹೊರಡಿಸಿದನು. ಕೊಡಗು ರಾಜರು ಧರಿಸುತ್ತಿದ್ದ ಉಡುಪನ್ನೂ, ಕಿರೀಟವನ್ನೂ ತಾನು ಧರಿಸಿಕೊಂಡನು. ಇವನ ಪರಿವಾರದವರಿಗೆ ಕೊಡಗಿನಲ್ಲಿ ಬೇಗನೆ ಒಂದು ಗಂಗೆಯುಂಟಾಗುವದೆಂದೂ, ತನ್ನೊಡನೆ ಸೇರಿದವರಿಗೆ ಅವರಿಂದ ಶಿಕ್ಷೆಯುಂಟಾಗುವ ಸಂದರ್ಭವು ಒದಗಬಹುದೆಂದೂ ತನ್ನ ಜೊತೆಯಲ್ಲಿದ್ದ ಜನರಿಗೆ ಆತನು ಎಚ್ಚರಿಕೆಯನ್ನು ಹೇಳಿದನು.

ಅಪರಂಪರನು ಕೆಂಚಮ್ಮನ ಹೊಸಕೋಟೆಯಲ್ಲಿ ತಾನೇ ಕೊಡಗಿನ ರಾಜನೆಂದು ಪ್ರಕಟಿಸಿಕೊಂಡನಂತರ ತನ್ನ ಪರಿವಾರದವರೊಡನೆ ಉತ್ತರ ಕೊಡಗಿಗೆ ಬಂದನು. ಆಗ ಲೀಹಾರ್ಡ್ ಸಾಹೇಬನು ಅವನನ್ನು ಹಿಡಿಯುವುದಕ್ಕೆ ಸೈನಿಕರನ್ನು ಉತ್ತರ ಕೊಡಗಿಗೆ ಕಳುಹಿಸಿದನು. ಆಗ ಅಪರಂಪರನು ಕೊಡಗನ್ನು ಬಿಟ್ಟು ಬೈತೂರಿಗೆ ಹೋದನು. ಈ ಸಂಗತಿಯನ್ನು ಕ್ಯಾಪ್ಟನ್ ಲೀಹಾರ್ಡಿಯು ಮಲಬಾರಿನ ಕಲೆಕ್ಟರನಿಗೆ ತಿಳಿಸಿದನು. ಮಲಬಾರಿನ ಕಲೆಕ್ಟರನು ಕಲ್ಲಿಕೋಟೆಯಿಂದ ಸೈನಿಕರನ್ನು ಕಳುಹಿಸಿ ಬೈತೂರಿನಲ್ಲಿ ಅಪರಂಪರನನ್ನು ದಸ್ತಗಿರಿ ಮಾಡಿಸಿ ಆತನನ್ನು ಸೈನಿಕರ ಪಹರೆಯಲ್ಲಿ ಕೊಡಗಿಗೆ ಕಳುಹಿಸಿದನು. ಆಗ ಕೊಡಗಿನ ಮೇಲಧಿಕಾರಿಯಾಗಿದ್ದು ಬೆಂಗಳೂರಿನಲ್ಲಿದ್ದ ಕಮಿಷನರು ಅಪರಂಪರನನ್ನು ರಾಜಕೀಯ ಕೈದಿಯಾಗಿ ಮೊದಲು ತಿರುಚಿನಾಪಳ್ಳಿಗೆ ಸಾಗಿಸಿ ಅಲ್ಲಿ ಸೆರೆಯಲ್ಲಿಟ್ಟರು. ಅಲ್ಲಿ ಅಪರಂಪರನು ತಾನು ಒಬ್ಬ ನಿರ್ದೋಷಿಯೂ ಜಂಗಮನೆಂತಲೂ ತನ್ನನ್ನು ಬಿಡುಗಡೆ ಮಾಡಬೇಕೆಂತಲೂ ಮದರಾಸಿನ ಗವರ್ನರ್ ಸಾಹೇಬರಿಗೆ ಅರ್ಜಿಯನ್ನು ಬರೆದುಕೊಂಡನು. ಆದರೆ ಕೊಡಗಿನ ಕಮಿಷನರ ಅಪ್ಪಣೆ ಇಲ್ಲದೆ ಆತನನ್ನು ಬಿಡುಗಡೆ ಮಾಡಲಾಗುವುದಿಲ್ಲವೆಂದು ಆ ಅರ್ಜಿಗೆ ಉತ್ತರ ಬಂದಿತು. ಇದಾಗಿ ಸ್ವಲ್ಪ ಕಾಲದಲ್ಲಿ ಅವನನ್ನು ಬೆಂಗಳೂರಿನ ಜೈಲಿನಲ್ಲಿ ಸೆರೆಯಲ್ಲಿಟ್ಟರು. ಈ ಜೈಲಿನಲ್ಲಿ ಅಪರಂಪರನು 1870 ನೇ ಇಸವಿಯ ವರೆಗೆ ಇದ್ದು ಆ ವರ್ಷ ಬಿಡುಗಡೆ ಮಾಡಲ್ಪಟ್ಟನು. ಬಿಡುಗಡೆಯಾದೊಡನೆ ಅಪರಂಪರನು ಕೊಡಗಿಗೆ ಬರುವುದಕ್ಕಿಷ್ಟಪಟ್ಟನು. ಆ ಸರಕಾರದವರು ಪೊಲೀಸು ಸುಪರ್ದಿನಲ್ಲಿ ಆತನನ್ನು ಕೊಡಗಿಗೆ ಕರೆದುಕೊಂಡು ಬಂದು ಕೆಲವು ದಿವಸಗಳಲ್ಲಿಯೇ ಹಿಂದಕ್ಕೆ ಕರೆದುಕೊಂಡು ಹೋದರು. ಆಪರಿ ಅಪರಂಪರನು ಹಿಂದಕ್ಕೆ ಹೋಗುವಾಗ ಶ್ರೀರಂಗಪಟ್ಟಣದಲ್ಲಿ ಸತ್ತು ಹೋದನು.

ಈ ಕಥೆಯಲ್ಲಿರುವ ಬರೆದಿರುವ ವಿಶಗಳನ್ನು ರೈಸ್ ಸಾಹೇಬರ ಗೆಜೆಟಿಯರಿನಿಂದಲೂ, ಇತರ ಕೆಲವು ಬರವಣಿಗೆಯ ಆಧಾರಗಳಿಂದಲೂ ಬರೆದಿದ್ದೇನೆ.

ಸಂಸ್ಥಾನಾಧಿಕಾರಿಗಳು ಅಲ್ಲಿಯ ಜನರು ಜಾಗೃತಿಗೊಂಡಿದ್ದನ್ನು ಕಂಡು ಅವರ ಕೋರಿಕೆಗಳನ್ನು ನೆರವೇರಿಸಲು ತಕ್ಕ ಮಟ್ಟಿಗೆ ಪ್ರಯತ್ನಿಸುತ್ತಿರುವುದು ಆನಂದದ ವಿಚಾರವಾಗಿದೆ. ಆದರೆ ಇತರ ಸಂಸ್ಥಾನಗಳು ಜನರ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಧಿಕ್ಕರಿಸಿ ದಬ್ಬಾಳಿಕೆಯನ್ನು ನಡೆಸಲು ಮೂಡುತ್ತಿರುವ ಪ್ರಯತ್ನವು ಶೋಚನೀಯವಾಗಿದೆ. ಮಾತ್ರವಲ್ಲ, ತಮ್ಮ ಪ್ರಜೆಗಳ ಕಾಂಕ್ಷೆಗಳನ್ನು ಅಡಗಿಸಲು ಬ್ರಿಟಿಷ್ ಸರ್ಕಾರದ ಸೈನ್ಯ ಮತ್ತು ಪೊಲೀಸ್ ಸಹಾಯವನ್ನು ಕೇಳುತ್ತಿರುವುದು ನಾಚಿಕೆಗೇಡಿನ ವಿಷಯವಾಗಿದೆ. ಬ್ರಿಟಿಷ್ ಸರ್ಕಾರವು ಈ ತರಹದ ಸಹಾಯವನ್ನು ಸಂಸ್ಥಾನಗಳ ಅರಸರುಗಳಿಗೆ ಇತ್ತಿದ್ದೇ ಆದರೆ ಕಾಂಗ್ರೆಸ್ ಸಂಸ್ಥೆಯು ಸಂಸ್ಥಾನಗಳ ಹೋರಾಟದಲ್ಲಿ ಕೈಹಾಕದಿರಲಾರದು. ಅಂದು ಸಂಸ್ಥಾನಗಳ ಮತ್ತು ಬ್ರಿಟಿಷ್ ಪ್ರಾಂತಗಳ ಹೋರಾಟವು ಒಂದಾಗಿ ಇಡೀ ಹಿಂದೂಸ್ಥಾನದ ಉದ್ದಗಲಕ್ಕೂ ಅಹಿಂಸಾ ಯುದ್ಧವು ಮೊಳಗದಿರಲಿಕ್ಕಿಲ್ಲ. ಈ ತರಹದ ಪರಿಸ್ಥಿತಿಯು ಉಂಟಾಗಲಿಕ್ಕಿಲ್ಲವೆಂದು ಆಶಿಸುತ್ತೇವೆ. ಹೇಗೂ ಕಾಂಗ್ರೆಸ್ ಸಂಸ್ಥೆಯವರು ಸಂಸ್ಥಾನಿಕರು ನಡೆಸುತ್ತಿರುವ ಸ್ವಾತಂತ್ರ್ಯ ಹೋರಾಟಕ್ಕೆ ಸಂಪೂರ್ಣ ಬೆಂಬಲವನ್ನೀಯುವರೆಂಬ ಭರವಸೆಯಿಂದ ತಮ್ಮ ಚಳವಳಿಯನ್ನು ಎಡೆಬಿಡದೆ ಧೈರ್ಯದಿಂದ ನಡೆಸುತ್ತಾ ಬರುವರಾಗಿ ನಂಬುವೆವು. ತತ್ಕಾಲ ಬ್ರಿಟಿಷ್ ಪ್ರಾಂತದವರು ಸಂಸ್ಥಾನಿಕರ ಚಳವಳಿದಲ್ಲಿ ಪ್ರತ್ಯಕ್ಷ ಭಾಗವಹಿಸಲಾರದವರಾದರೂ ವಿಷಮಾವಸ್ಥೆಯ ಕಾಲದಲ್ಲಿ ಅವರ ಬೆಂಬಲಕ್ಕೆ ಹೋಗದಿರಲಾರರು. ಅಷ್ಟರ ವರೆಗೆ ಸಂಸ್ಥಾನಿಕರು ತಮ್ಮ ಸ್ವಶಕ್ತಿಯಿಂದಲೇ ಹೋರಾಟವನ್ನು ನಡೆಸಿ ಜಯಶೀಲರಾಗುವರೆಂಬ ನಂಬಿಕೆ ನಮಗಿದೆ.

ಇಟಲಿ ಫ್ರಾನ್ಸಿನ ಬಿಕ್ಕಟ್ಟು.

ಒಪ್ಪಂದಗಳ ಸುರಿಮಳೆಯೋ ಎಂಬಂತೆ ಒಂದು ಕಡೆ ಬ್ರಿಟನ್ನಿಗೂ, ಜರ್ಮನಿಗೂ, ಇನ್ನೊಂದೆಡೆ ಜರ್ಮನಿಗೂ, ಫ್ರಾನ್ಸಿಗೂ, ಮತ್ತೊಂದೆಡೆ ಬ್ರಿಟನಿಗೂ, ಇಟಲಿಗೂ ಮುಂದೆ ಪರಸ್ಪರ ಕಲಹ ಬಾರದಂತೆ ಒಪ್ಪಂದಗಳಾಗಿವೆ. ಹೀಗಿರುವಾಗ ಬ್ರಿಟನ್, ಜರ್ಮನಿ ಮತ್ತು ಇಟಲಿ ಈ ತ್ರಿಮೂರ್ತಿಯರೊಳಗೆ ಐಕ್ಯತೆ ನೆಲೆಸಿದಂತಾಯಿತು. ಇದರಿಂದ ಯೂರೋಪಿನ ಸ್ಥಿತಿಯು ಶಾಂತಸ್ಥಿತಿಗೆ ಬಂತೆಂದು ತಿಳಿಯಬೇಡಿರಿ. ಇದೀಗಲೇ ಫ್ರಾನ್ಸಿಗೂ, ಇಟಲಿಗೂ ಪರಸ್ಪರ ವಿರೋಧವು ಹುಟ್ಟಿದೆ. ಕಾರಣವೆಂದರೆ, ಫ್ರಾನ್ಸಿಗೆ ಸೇರಿದ ಕೋರ್ಸಿಕಾ ದ್ವೀಪ, ಆಫ್ರಿಕಾದ ಉತ್ತರ ಭಾಗದಲ್ಲಿರುವ ಟ್ಯೂಸಿನಿಯಾ ಮತ್ತು ಫ್ರೆಂಚ್ ಕಾವಳಿಯಲ್ಲಿರುವ ನಿಸೆ ಪಟ್ಟಣ ಇವು ನಮ್ಮವು. ನಮಗೆ ಸೇರಬೇಕೆಂದು ಇಟಲಿಯು ಬಹಿರಂಗವಾಗಿ ಇಚ್ಛಾ ಪ್ರದರ್ಶನ ಮಾಡಿ

ಲ್ಲಿ ಕೋರ್ಸಿಕಾ ಮತ್ತು ಟ್ಯೂಸಿನಿಯಾ ಜನತೆಯು ತಮಗೆ ಫ್ರೆಂಚ್ ಅಧಿಕಾರವೇ ಬೇಕೆಂದು ಪ್ರದರ್ಶನವೊಂದನ್ನು ಜರಗಿಸಿತು.

ಟ್ಯೂಸಿನಿಯಾದಲ್ಲಿ ಫ್ರೆಂಚರಿಗಿಂತಲೂ ಇಟೆಲಿ ಜನಸಂಖ್ಯೆಯೇ ಹೆಚ್ಚು. ಆದರೂ ಆ ಇಟೆಲಿಯನ್ ಜನರು ಫ್ರೆಂಚ್ ಪ್ರಭುತ್ವದಲ್ಲಿ ನಂಬಿಕೆಯನ್ನಿಡುವಿದ್ದ ಪಕ್ಷ ಎಂದೋ ಇದು ಇಟೆಲಿಯನರ ವಶವಾಗುತ್ತಿತ್ತು. ಇದರೊಂದಿಗೆ ಕೋರ್ಸಿಕಾ ಮತ್ತು ನಿಸೆ ಪಟ್ಟಣಗಳನ್ನು ವಶಪಡಿಸಿಕೊಂಡರೆ ಭೂಮಧ್ಯ ಸಮುದ್ರದ ಪಶ್ಚಿಮ ಕರಾವಳಿಯು ಇಟೆಲಿಯನರ ಕೈಸೇರಿ, ಅವರಿಗೆ ಫ್ರಾಂಕೋವಿನ ಸಹಾಯವಿನ್ನು ಪಡೆದು ಜಿಬ್ರಾಲ್ಟರ್ ಜಲ ಸಂಧಿನ್ನು ಮುಚ್ಚಿಸಿ ಬ್ರಿಟಿಷರನ್ನು ಭೂಮಧ್ಯ ಸಮುದ್ರಕ್ಕೆ ಕಾಲಿಕ್ಕದಂತೆ ಮಾಡಲು ಸಾಧ್ಯವಾಗುವುದು. ಈ ಮುಂದಾಲೋಚನೆಯಿಂದ ಇಟೆಲಿಯು ಸಮಯ ಕಾಯುತ್ತಿದೆ. ಹೊರಗೆ ತೋರುವಂತೆ ಪರಸ್ಪರ ಒಪ್ಪಂದವಾಗಿದ್ದರೂ ಒಳಗೊಳಗೇ ಈ ರೀತಿಯ ಕೃತಿಮಗಳು ನಡೆಯುತ್ತಿರುವುದರಿಂದ ಯುದ್ಧವು ಎಂದಾದರೊಂದು ದಿನ ಅನಿವಾರ್ಯವಾಗಿ ಬಂದೊದಗದಿರದು.

ತ್ರಿಪುರ ಕಾಂಗ್ರೆಸ್ ಸಿದ್ಧತೆ.

ತ್ರಿಪುರ ಕಾಂಗ್ರೆಸ್ ನಗರದ ಕೆಲಸವು ಜನವರಿ ಅಂತ್ಯದಲ್ಲಿ ಪೂರ್ತಿಯಾಗಬಹುದು. ಅವಿಶ್ರಾಂತಿಯಿಂದ ಸ್ವಯಂಸೇವಕರು ಕೆಲಸ ಮಾಡುತ್ತಿರುವರು. ಪ್ರತಿನಿಧಿಗಳ ಒಂದನೇ ಮೊಖ್ತಾಂ ಲೈನು ಕಟ್ಟಲ್ಪಟ್ಟಿದೆ. ಅಲ್ಲಿಯ ಜನರಿಗೆ ನೀರಿನ ಸರಬರಾಯಿ ಬಗ್ಗೆ ಎರಡು ಬಾವಿಗಳು ತೋಡಲ್ಪಟ್ಟಿವೆ. ಪ್ರದರ್ಶನಾಲಯವು ಮತ್ತು ಇತರ ಸನ್ನಿವೇಶಗಳ ಬಗ್ಗೆ ನಿಶ್ಚಿತೆಗಳಾಗಿವೆ. ಅಲ್ಲಿ ಕಾಯಿಲೆಷ್ಟರ ಬಗ್ಗೆ ಒಂದು ಕಾಂಗ್ರೆಸ್ ಆಸ್ಪತ್ರೆಯನ್ನು ತೆರೆಯಲ್ಪಡುವದು.

ಈ ವರೆಗೆ 50 ಸಾವಿರ ರೂಪಾಯಿ ವಸೂಲಾಗಿದೆಯಲ್ಲದೆ ಸದ್ಯದಲ್ಲೇ 1 ಲಕ್ಷ ರೂಪಾಯಿ ವಸೂಲಾಗುವಂತಿದೆ. ಕಾಂಗ್ರೆಸ್ ನಗರಕ್ಕೆ ಇಂದು ಸ್ವಾಗತ ಕಮಿಟಿಯ ಕಚೇರಿ ಮತ್ತು ಇತರ ಆಫೀಸುಗಳು ಸಾಗಿಸಲ್ಪಡುವವು. ಈ ವರ್ಷದ ಅಧಿವೇಶನಕ್ಕೆ 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವದೆಂದು ನಿಶ್ಚಯಿಸಲಾಗಿದೆ. ಈ ವರ್ಷ ಕಾಂಗ್ರೆಸ್ ಅಧ್ಯಕ್ಷರನ್ನು ಆನೆಯ ಮೇಲೆ ಮೆರವಣಿಗೆ ಮಾಡಿಸಬೇಕೆಂದು ಸೂಚನೆ ನಡೆಡಿದಿದೆ. ಅಂತ ಪ್ರಪಂಚದ ಅಪೋಷ ಸಂಸ್ಥೆಯಾದ ಕಾಂಗ್ರೆಸಿನ ಅಧಿವೇಶನವ ಸಿದ್ಧತೆಗಳುತೀಕ್ಷ್ಣದಲ್ಲೇ ಪೂರ್ತಿಯಾಗಿ ಅಧಿವೇಶನವು ಯಶಸ್ವಿಯಾಗಲೆಂದು ಹಾರೈಸುವೆವು.

ವರ್ತಮಾನ ಸಂಗ್ರಹ.

ಒಳದೇಶ.

ಸಿಬ್ಬಂದಿ ಖೋತೆಯ ಸಮ್ಮಂಧ ಭಾಗಮಂಡ್ಲ ನುತ್ತು ಸುಂಟಿಕೊಪ್ಪ ನಾಡುಖಜೇರಿಗಳು ವಜಾಮಾಡಲ್ಪಟ್ಟಿರುವೆಂದು ವರ್ತಮಾನ.

ಬೊಂಬಾಯಿ ಕೊಡಗು ಸಂಘದವರು ಇದೇ ತಾರೀಕು 11 ರಲ್ಲಿ ಹುತ್ತರಿ ಹಬ್ಬವನ್ನು ಮೆ. ಎಸ್. ಎಸ್. ಉತ್ತಯ್ಯನವರ ಭವನದಲ್ಲಿ ನಡೆಯಿಸಿದರಾಗಿ ವರ್ತಮಾನ.

ದಕ್ಷಿಣ ಕೊಡಗು ಮೂರ್ಕಲ್ ರೋಗಿನಲ್ಲಿ ಭಯಂಕರ ಹಾವಳಿಯನ್ನು ನಡೆಸುತ್ತಿದ್ದ 'ಮೂರ್ಕಲ್ ರೋಗ್' ಎಂಬ ಪುಂಡಾನೆಯನ್ನು ಸೋಮವಾರಪೇಟೆ ಪ್ಲಾಂಟರುಗಳಾದ ಶ್ರೀ ಡಿ. ಸಿದ್ದಣ್ಣನವರು ಮತ್ತು ಶ್ರೀ ಡಿ. ಎಚ್. ದಾಸಪ್ಪನವರು ಕಳೆದ ತಿಂಗಳು 25 ನೇ ಶುಕ್ರವಾರ ಮಧ್ಯಾಹ್ನ ಮೂರ್ಕಲ್ ಫಾರೆಸ್ಟಿನಲ್ಲಿ ಗುಂಡು ಹೊಡೆದು ಕೊಂದಿರುವದಾಗಿ ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 110 ಏಲಕ್ಕೆ ಮಣಕ್ಕೆ ರೂ. 34 ಕ್ರಯವಿದೆ.

ಇಲ್ಲಿಯ ವೇದಾಂತ ಸಂಘದಲ್ಲಿ ತಾ. 16-12-38 ರಲ್ಲಿ ಶಿವಾನಂದರ ಜಯಂತಿಯು ಆಚರಿಸಲ್ಪಡುವದೆಂದೂ, ಆ ಸಂದರ್ಭದಲ್ಲಿ ಶ್ರೀಯುತ ಬಿ. ಕೆ. ಸುಬ್ರಾಯರು 'ರಾಮದಾಸ'ರ ಹರಿಕಥೆಯನ್ನು ಮಾಡುತ್ತಾರಾಗಿಯೂ, ಎಲ್ಲರಿಗೂ ಆಹ್ವಾನವಿಜೆಯಾಗಿಯೂ ತಿಳಿಯುತ್ತೇವೆ.

ತಾರೀಕು 28-11-38 ರಲ್ಲಿ ಇಲಿ ನಡೆದ ಬಸ್ ಮೂಲೀಕರ ಸಂಘದ ವಿಶೇಷ ಮಹಾಸಭೆಯಲ್ಲಿ ಸಿ. ಪಿ. ಸಿ. ಕಂಪೆನಿಯ ಜನರಲ್ ಮೇನೇಜರಾದ ಶ್ರೀ ವಿ. ಎಸ್. ಕುಡುಪರವರನ್ನು ಕೊಡಗು ಟ್ರಾಫಿಕ್ ಬೋರ್ಡಿಗೆ ಸರಕಾರದವರ ನಾಮಜನೆಯಂತೆ ಆರಿಸಲಾಗಿದೆಯೆಂಬೂ, ಸರ್ಕಾರದವರ ಬಸ್ ಮೂಲೀಕರ ಪರವಾಗಿ ಒಂದು ಸ್ಥಾನವನ್ನು ಟ್ರಾಫಿಕ್ ಬೋರ್ಡಿನಲ್ಲಿ ಹುಟ್ಟಿದ್ದಕ್ಕೆ ಕೃತಜ್ಞತಾ ತರಾವೊಂದನ್ನು ಪಾಸುಮಾಡಿರುವರಾಗಿಯೂ ತಿಳಿಯುತ್ತೇವೆ.

ವಿರಾಜಪೇಟೆ.

ಶ್ರೀಕೃಷ್ಣ ವಾಕ್ಚಲನ ಚಿತ್ರದವರು ಇಲ್ಲಿ ಚಿತ್ರಗಳನ್ನು ಪ್ರದರ್ಶಿಸುತ್ತಿರುವರು.

ಇಲ್ಲಿಯ ಹೈಸ್ಕೂಲಿನ ವಾರ್ಷಿಕೋತ್ಸವವು ಈ ತಾರೀಕು 17 ರಲ್ಲಿ ರಾ. ಬಹದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ಇಲ್ಲಿಯ ಹೈಸ್ಕೂಲಿನ ಶಾರೀರಕ ಶಿಕ್ಷಣಾಧ್ಯಾಪಕರಾದ ಶ್ರೀ ಮೊಳೇಟಿರ ತಿಮ್ಮಯ್ಯನವರು 15-11-38 ರಿಂದ ನಿವೃತ್ತರಾದ ಕಾರಣ, ಹಾತೂರು ಶಾಲೆಯ ಅಧ್ಯಾಪಕರಾಗಿದ್ದ ಶ್ರೀ ಬಿಟ್ಟಿಯಂಡ ಮೊಣ್ಣಯ್ಯನವರನ್ನು ಅವರ ಬದಲಿಗೆ ನೇಮಿಸಿರುವರು.

ತಾರೀಕು 2-12-38 ರಲ್ಲಿ ಕೊಡಗು ಪ್ರಾಂತೀಕ ಮುಸ್ಲಿಂ ಲೀಗಿನ ಆಶ್ರಯದಲ್ಲಿ ಶೌಕತಾಲಿಯವರ ನಿಧನಕಾಗಿ ಬಿಳುಗುಂದ, ಅಮ್ಮತ್ತಿ ಮತ್ತು ಇಲ್ಲಿಯ ಮಸೀದಿಗಳಲ್ಲಿ ಪ್ರಾರ್ಥನೆ ನಡೆಯಿತೆಂದೂ, ಇಲ್ಲಿಯ ಅಂಜುಮಾನ್ ಹಾಲಿನಲ್ಲಿ ಸಭೆ ನೆರೆದು ದುಃಖ ಪ್ರದರ್ಶನದ ತರಾವು ಮಂಜೂರ್ಮಾಡಲಾಯಿತೆಂದೂ ತಿಳಿಯುತ್ತೇವೆ.

ಅಮ್ಮತ್ತಿ.

ಶ್ರೀ ಕುಟ್ಟಂಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆದು ರೆವಿನ್ಯೂ ಮ್ಯಾನುವಲಿನ ತಿದ್ದುಪಡಿಯನ್ನು ನಿಷೇಧಿಸಿ ತರಾವು ಪಾಸುಮಾಡಿತು.

ಬಾಳೆಲೆ.

ಇಲ್ಲಿ ಒಂದು ಸಾರ್ವಜನಿಕ ಮೀಟಿಂಗು ಶ್ರೀ ಪಾರುವಂಗಡ ಸಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ರೆವಿನ್ಯೂ ಮ್ಯಾನುವಲಿನ ತಿದ್ದುಪಡಿ, ನಾಡುಖಜೇರಿಗಳ ತೆಗೆಯುವಿಕೆ, ಸ್ಕೂಲ್ ಫೀಜು ಏರಿಸುವಿಕೆ ಮತ್ತು ಕೊಡಗಿನ ಭವಿಷ್ಯತ್ತನ್ನು ಕುರಿತು ಪೈಸರಾಯರಲ್ಲಿಗೆ ಮೆಮೋರಿಯಲ್ ಕಳುಹಿಸಿದ್ದನ್ನು ನಿಷೇಧಿಸಿ ತರಾವುಗಳನ್ನು ಪಾಸುಮಾಡಿತು.

ಗಜೆಟ್ ವರ್ತಮಾನ.

ಕಳೆದ ತಿಂಗಳಲ್ಲಿ ಕೊಡಗಿನಲ್ಲಿ 306 ಜನನಗಳೂ, 349 ಮರಣಗಳೂ ಸಂಭವಿಸಿರುವದೆಂದು ಪ್ರಕಟವಾಗಿದೆ.

ಮುನ್ಸೀಫರಾದ ಶ್ರೀ ಪುಚ್ಚಿಮಾಡ ನಾಣಯ್ಯನವರಿಗೆ ಉತ್ತರ ಕೊಡಗಿನ ಎರಡನೇ ಕ್ಲಾಸು ಮೇಜಿಸ್ಟ್ರೇಟರ ಅಧಿಕಾರ ಕೊಡಲಾಗಿದೆ.

ದಕ್ಷಿಣ ಕೊಡಗಿನ ಸುಬೇದಾರರಾದ ಶ್ರೀ ನೆಲ್ಲಮಕ್ಕಡ ಸುಬ್ಬಯ್ಯನವರಿಗೆ ದಕ್ಷಿಣ ಕೊಡಗಿನ ಎರಡನೇ ಕ್ಲಾಸು ಮೇಜಿಸ್ಟ್ರೇಟರ ಅಧಿಕಾರವನ್ನು ಕೊಡಲಾಗಿದೆ.

ಇಂಡಿಯನ್ ಮಿಲಿಟರಿ ಎಕಾಡೆಮ್ಮಿ ಮತ್ತು ರಾಯಲ್ ಇಂಡಿಯನ್ ನೇಪಿಗೆ ಪ್ರವೇಶದ ಬಗ್ಗೆ ಪರೀಕ್ಷೆಗಳು ತಾ. 20-8-38 ಮತ್ತು 27-3-39 ರಲ್ಲಿ ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನಿನವರಿಂದ ದೆಲ್ಲಿಯಲ್ಲಿ ನಡೆಸಲ್ಪಡುವವು.

1939-40 ಕ್ಕೆ ಫೈನಾನ್ಸ್ ಕಮಿಟಿ ಮೆಂಬರುಗಳಾಗಿ ಶ್ರೀಗಳಾದ ಕೆ. ಸಿ. ತಿರುಂಬಯ್ಯ, ಪಿ. ಜಿ. ಮುದ್ದಮ್ಮಯ್ಯ ಮತ್ತು ಪಿ. ಐ. ಬೆಳ್ಯಪ್ಪನವರು ಚುನಾಯಿಸಲ್ಪಟ್ಟಿರುವರಲ್ಲದೆ, ಚೀಫ್ ಕಮಿಷನರು ಶ್ರೀ ಜೆ. ಇ. ಯಂ. ಮಿಚೆಲ್, ಮತ್ತು ಎಚ್. ಎಫ್. ಮೂರ್ಲೆಂಡರವರನ್ನು ಸದರಿ ಕಮಿಟಿಯ ಮೆಂಬರುಗಳಾಗಿ ನೇಮಿಸಿ ಮಾಡಿರುವರು

ಇನ್ನು ಮುಂದಕ್ಕೆ ಹುಲಿಯ ಚರ್ಮಕ್ಕೆ ರೂ. 3-8-0, ಹಲ್ಲಿಗೆ 0-1-0, ಉಗುರಿಗೆ 0-0-6 ಪೈಯಂತೆಯೂ, ಚಿರತೆಯ ಚರ್ಮಕ್ಕೆ 0-12 0, ಹಲ್ಲಿಗೆ 0-0-6, ಉಗುರಿಗೆ 0-0-3 ಪೈಯಂತೆಯೂ, ಮತ್ತು ಕೆನ್ನಾಯಿಯ ಚರ್ಮಕ್ಕೆ 0-2-0, ಹಲ್ಲಿಗೆ 0-0-3 ಉಗುರಿಗೆ 0-0-3 ಯಂತೆಯೂ ಬಹುಮಾನ ಕೊಡಬೇಕಾಗಿ ತಿದ್ದುಪಡಿಯೊಂದು ಪ್ರಕಟವಾಗಿದೆ.

—೦೦—

ಹಿಂದೂದೇಶ.

ಲಾಹೋರಿನ ಕಮಲಾ ಮೂನೀಟೊ ನಿನವರು ಮಹಾತ್ಮ ಗಾಂಧಿಯವರ ಗಡಿನಾಡಿನ ಫಿಲ್ಮಿನ ಚಿತ್ರ ತೆಗೆದಿರುತ್ತಾರೆ.

ಮಹಾತ್ಮ ಗಾಂಧಿಯವರು ಜನವರಿ 1ನೇ ದಿನ ಬಾರ್ಡೋಲಿಗೆ ಹೋಗಿ ಅಲ್ಲಿ ಸರದಾರ ಪಟೇಲರೊಡನೆ ಒಂದು ತಿಂಗಳ ವರೆಗಿರುವರು.

ಬಿಹಾರ್ ಪ್ರಾಂತ್ಯದಲ್ಲಿ ಕಳೆದ 4 ತಿಂಗಳಲ್ಲಿ 3 ಲಕ್ಷ ಅವಿದ್ಯಾವಂತ ಯುವಕರನ್ನು ವಿದ್ಯಾವಂತರನ್ನಾಗಿ ಮಾಡಿರುವುದು ಶ್ಲಾಘನೀಯವಾಗಿದೆ.

ಮದ್ರಾಸ್ ಅಧಿಪತ್ಯದ ಎಲ್ಲಾ ಕಾಲೇಜ್ ವಿದ್ಯಾರ್ಥಿಗಳಿಗೂ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂದು ಮದ್ರಾಸ್ ಎಸೆಂಬ್ಲಿಯಲ್ಲಿ ಬಂದ ತರಾವು ಮಂಜೂರಾಗಿದೆ.

ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಮೇಲ್ವಿಚಾರವನ್ನು ವಹಿಸುವುದಕ್ಕಾಗಿ ಮಾತ್ರವೇ, ಒಬ್ಬ ಮಂತ್ರಿಗಳಿರಬೇಕೆಂದು ಮಹಾತ್ಮಜೀಯವರು 'ಹರಿಜನ' ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದಾರೆ.

ಸಂಯುಕ್ತ ಪ್ರಾಂತವಲ್ಲಿ ಕಡ್ಡಾಯದ ಪ್ರೈಮರಿ ವಿದ್ಯಾಭ್ಯಾಸದ ಯೋಜನೆಯೊಂದು ತಯಾರಾಗಿದ್ದು, ಅಲ್ಲಿನ 80 ಲಕ್ಷ ಮಂದಿ ಮಕ್ಕಳಿಗೆ ಶಿಕ್ಷಣ ಕೊಡಲು 7 ವರ್ಷಗಳಲ್ಲಿ 6 ಕೋಟಿ ರೂಪಾಯಿಗಳು ಬೇಕಾಗಿವೆ.

ಮೈಸೂರು ಕಾಂಗ್ರೆಸ್ಸಿನ ದ್ವಿತೀಯ ಅಧಿವೇಶನವನ್ನು 1939ನೇ ಏಪ್ರಿಲ್ ತಿಂಗಳಲ್ಲಿ ವಿದುರಾಶ್ವತವಲ್ಲಿ ಕೂಡಿಸಬೇಕೆಂದು ನಿಶ್ಚಯಿಸಲಾಗಿದೆ. ಕಾರಣದಿಂದ ಈ ಅಧಿವೇಶನಕ್ಕೆ ಎಲ್ಲರೂ ಧನ ಸಹಾಯ ಮಾಡಬೇಕೆಂದು ಸ್ವಾಗತ ಮಂಡಲಿಯ ಅಧ್ಯಕ್ಷರು ಬಿನ್ನವಿಸಿಕೊಂಡಿದ್ದಾರೆ.

ಮೂನ್ಯ ಆಗಾಖಾನರು ತಾರೀಕು 7 ರಲ್ಲಿ ಕರಾಚಿಗೆ ವಿಮಾನ ಮೂಲಕ ಬಂದಿಳಿದರು. ಹಿಂದೂ ಮುಸಲ್ಮಾನರ ಒಕ್ಕಟ್ಟಿನ ಕೆಲಸವು ತಮಗೆ, ಪ್ರಿಯಕರವಾದದ್ದೆಂದೂ, ಹಿಂದೂಸ್ಥಾನವನ್ನು ಬಿಡುವದಕ್ಕಿಂತ ಮುಂಚೆ ತಾವು ಅದನ್ನು ಸಾಧಿಸಲು ಪ್ರಯತ್ನಮಾಡುವದಾಗಿಯೂ ಹೇಳಿದರು.

ಅಸಾಂ ಮಂತ್ರಿಮಂಡಲದ ಮೇಲೆ ಅಲ್ಲಿನ ಎಸೆಂಬ್ಲಿಯಲ್ಲಿ ಮಿ. ಯಂ. ಹುಸೇನ್ ಚೌಧರಿಯವರು ತಂದ ಅವಿಶ್ವಾಸದ ತರಾವು ಫಲಕಾರಿಯಾಗಲಿಲ್ಲ. ಇನ್ನು ಕೆಲವು ಅವಿಶ್ವಾಸದ ತರಾವುಗಳು ಎಸೆಂಬ್ಲಿಯ ಮುಂಬರಲೇ ಇಲ್ಲ. ಅಲ್ಲಿನ ಪ್ರಧಾನರಾದ ಶ್ರೀ. ಬಾರ್ಡೋಲಿಯವರು ಗೆದ್ದರು.

ಕಪರ್ಥಲಾ ಮಹಾರಾಜರ ಮೊಮ್ಮಗಳಾದ ರಾಜಕುಮಾರಿ ಇಂದಿರೆಯು ತಮ್ಮ ಹಿರಿಯರ ಇಷ್ಟಕ್ಕೆ ವಿರೋಧವಾಗಿ ಲಂಡನಿನಲ್ಲಿ ರಂಗಭೂಮಿಯ ನಟಿಯ ಜೀವನವನ್ನು ಕೈಕೊಳ್ಳಲು ನಿರ್ಧರಿಸಿರುವಳು. ಆಗಲೇ ಒಂದೆರಡು ಪ್ರಯೋಗಗಳಲ್ಲಿ ಅಭಿನಯಿಸಿಯೂ ಇರುವಳು. ಈಕೆಗೆ ರಾಜಕುಮಾರಿಯ ಜೀವನವು ಬೇಡವಾಗಿದೆಯಂತೆ!

ಓರಿಸ್ಸಾ ಆಧಿಪತ್ಯಕ್ಕೆ ಸೇರಿದ ಸಣ್ಣ ದೇಶೀಯ ಸಂಸ್ಥಾನವಾದ ರಂಗಪ್ಪುರ ಎಂಬಲ್ಲಿ ಅಧಿಕಾರಿಗಳು, ಐದು ಜನರಿಗಿಂತಲೂ ಹೆಚ್ಚು ಮಂದಿ ಪ್ರಜೆಗಳು ಸೇರಿ ಸಭೆ ನಡಿಸಕೂಡದೆಂದೂ, ರಾಜಕೀಯ ಚಳುವಳಿಗಾಗಿ ಧನ ಸಂಗ್ರಹಿಸಬಾರದೆಂದೂ, ಜಿನರು ವರ್ತಮಾನ ಪತ್ರಿಕೆಗಳನ್ನು ಓದಬಾರದೆಂದೂ ನಿರ್ಬಂಧದ ಹುಕುಮು ಜಾರಿ ಮಾಡಿರುವರೆಂದು ತಿಳಿಯುವೆವು.

ತ್ರಿಪುರಿಯ ಕಾಂಗ್ರೆಸ್ ಅಧಿವೇಶನದ ಸಿದ್ಧತೆ ಭರದಿಂದ ಸಾಗುತ್ತಿದೆ. ಬರುವ ಫೆಬ್ರವರಿಯ ಅಂತ್ಯ ಮತ್ತು ಆದೇ ಮಾರ್ಚಿಯ ತಾ. 5ರ ನಡುವೆ ಕಾಂಗ್ರೆಸ್ ಅಧಿವೇಶನ ನಡೆಯಲಿದೆ, ಇದಕ್ಕೆ ಖರ್ಚು ಸುಮಾರು 2 ಲಕ್ಷ ರೂಪಾಯಿ ಆಗಲಿನ ಪ್ರದರ್ಶನವನ್ನು ಪ್ರಾಯಶಃ ಮಹಾತ್ಮರೇ ತೆರೆಯುವರು. ಸುಮಾರು 2 ಸಾವಿರ ಮಂದಿ ವಾಲಂಟಿಯರುಗಳನ್ನು ಇವಕ್ಕಾಗಿ ಕೂಡಿಸುವ ಯತ್ನ ನಡೆಯುತ್ತಿದೆ.

—೦೦—

ಪ್ರಕಟಣೆ.

ಕೆಲವು ವರ್ಷಗಳಿಂದೀಚೆಗೆ ದೇಶೀಯರ ಪ್ರೋತ್ಸಾಹದಿಂದ ಮೈಸೂರು ಪಟ್ಟದಲ್ಲಿ ಊಟದ ಮತ್ತು ವಾಸದ ಹೊಟೆಲನ್ನು ನಡೆಸುತ್ತಿದ್ದು ಒಂದು ವರ್ಷದಿಂದೀಚೆಗೆ "ದಿ ಕುರ್ಗ್ ಲಾಡ್ಜ್" ಎಂಬ ಹೆಸರಿನಿಂದ ನಡಿಸುತ್ತಿರುವ ಹೊಟೆಲನ್ನು ಹಾಲಿ ಇರತಕ್ಕ ಸ್ಥಳವು ಆತಿಥಿಗಳ ಸೌಕರ್ಯಕ್ಕೆ ಅನಾನುಕೂಲವೆಂದು ಕಂಡು ಬಂದ ಕಾರಣ, ಡಿಸೆಂಬರ್ ತಾ. 7 ರಿಂದ "ದಿ ನೇಶನಲ್ ಹೊಟೇಲ್" ಎಂಬ ಹೆಸರಿನಿಂದ ತೆರೆಯಲ್ಪಟ್ಟು ಮೆಡಿಕಲ್ ಕಾಲೇಜ್ ಎಧುರು ಇರುವ ಹೊಸ ಮನೆಗೆ ವರ್ಗಾಯಿಸಲಾಗಿದೆ.

ಸದರಿ ಮನೆಯು ಮುಂದೆ ಇದ್ದ ಸ್ಥಳಕ್ಕಿಂತ ಅನುಕೂಲವಾದ ಸ್ಥಳದಲ್ಲಿ ಅಂದರೆ ರೈಲ್ವೆ ಸ್ಟೇಶನ್, ಬಸ್ಸ್ ಸ್ಟೇಂಡ್, ಮೆಡಿಕಲ್ ಕಾಲೇಜ್, ಶ್ರೀಕೃಷ್ಣ ತಾಜೇಂದ್ರ ಮತ್ತು ಆಯುರ್ವೇದ ಆಸ್ಪತ್ರೆಯ ಹತ್ತಿರ ಇದೆ.

ದೇಶೀಯರೆಲ್ಲರೂ ಮೊದಲಿನಂತೆಯೇ ಪ್ರೋತ್ಸಾಹವನ್ನು ತೋರಿಸಿ ಚಾಲಕರ ಕೃತಜ್ಞತೆಗೆ ಪಾತ್ರರಾಗಬೇಕಾಗಿ ಸವಿನಯ ಪ್ರಾರ್ಥನೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ದಿ ಮೇನೇಜರ್,
ದಿ ನೇಶನಲ್ ಹೊಟೆಲ್,
ಸಯ್ಯಾಜಿರಾವ್ ರೋಡ್,
ಮೈಸೂರು.

—೦೦—

'ಕೊಡಗು' ಲಿಮಿಟೆಡ್ ಕಂಪೆನಿಯ ೧೬ನೇ ವಾರ್ಷಿಕ ಮಹಾಸಭೆ.

ತಾ. 26-11-38 ರಲ್ಲು ವೀರಾಜಪೇಟೆ ಅಂಜುಮೂನ್ ಹಾಲ್‌ನಲ್ಲಿ ನಡೆದ 'ಕೊಡಗು' ಕಂಪೆನಿಯ ಪಾಲುದಾರರ ವಾರ್ಷಿಕ ಮಹಾ ಸಭೆಯ ನಡವಳಿಕೆ.

68 ಜನ ಮೆಂಬರರು ಹಾಜರಿದ್ದರಲ್ಲದೆ ಅನೇಕರ ಪ್ರಾಕ್ಸಿಗಳು ಬಂದಿದ್ದವು.

ಶ್ರೀ ಉದಯಾಂಡ ಅಣ್ಣಯ್ಯನವರು ಅಧ್ಯಕ್ಷರಾಗಿದ್ದರು.

ಮೊದಲು ಓಟು (ಪ್ರಾಕ್ಸಿ) ಗಳ ಎಣಿಕೆ ಮಾಡಿ ಸರಿಪಡಿಸಲಾಯಿತು.

ಡೈರೆಕ್ಟರರ ರಿಪೋರ್ಟನ್ನು ಓದಿ 11 ನೇ ಪ್ಯಾರಾ ವಿನಹ ಮುಂಜೂರುಮಾಡಲಾಯಿತು.

1933-34 ಮತ್ತು 1934-35 ರ ಚಂದಾ ಬಾಕಿಯನ್ನು ಓದಿ ಅದನ್ನು ವಜಾ ಮಾಡುವುದು ಬೇಡವೆಂದು ತೀರ್ಮಾನಿಸಲಾಯಿತು.

ಹಾಲಿ ವರ್ಷದ ಆಡಿಟರನ್ನಾಗಿ ಶ್ರೀ ಬಿ. ಶಾಮಣ್ಣನವರನ್ನೇ ನೇಮಿಸಲಾಯಿತು.

ಆಡಿಟು ವರ್ಷಕ್ಕೆ ಅವರಿಗೆ 40 ರೂಪಾಯಿ ಆಡಿಟ್ ಫೀಜು ಕೊಡಬಹುದೆಂದು ನಿಶ್ಚಯಿಸಲಾಯಿತು.

ಈ ಮೀಟಿಂಗಿನಲ್ಲಿ ನಿವೃತ್ತರಾದ ಡೈರೆಕ್ಟರುಗಳ ಬದಲಿಗೆ ಶ್ರೀಗಳಾದ ನಡಿಕೇರಿಯಂಡ ಸೋಮಣ್ಣ, ಮೇರಿಯಂಡ ಮಾದಪ್ಪ, ಮುಕ್ಕಾಟಿರ ಅಪ್ಪಣ್ಣ, ಉದಯಾಂಡ ಅಣ್ಣಯ್ಯ ಮತ್ತು ಯಂ. ಯಂ. ಸಿದ್ದೀಕರನ್ನು ಚುನಾಯಿಸಲಾಯಿತು.

ನಿವೃತ್ತರಾದ ಡೈರೆಕ್ಟರುಗಳಿಗೂ, ಈ ದಿನ ಸಭೆ ನಡೆಸಲು ಸ್ಥಳ ಕೊಟ್ಟ ಅಂಜುಮೂನ್ ಹಾಲ್‌ನವರಿಗೂ, ಸಭೆಯ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಿಕೊಟ್ಟ ಅಧ್ಯಕ್ಷರಿಗೂ ಪಂಚನೆಗಳನರ್ಪಿಸಿದ ನಂತರ ಸಭೆಯು ಬರಕಾಸ್ತಾಯಿತು.

ಯು. ಯಂ. ಅಣ್ಣಯ್ಯ,
(ಅಧ್ಯಕ್ಷರು.)

—೦೦—

Coorg Forest Department,
South Division,
Mercara, 5th Dec. 1938.

NOTICE.

Tenders are invited by 20-12-'38 for for the supply of the following quantities of gram, ragi and rice required for the use of the Live Stock of the Coorg Forest Department for 1939-40.

Gram 98.40 pallas.
Ragi 215,00 ,,
Rice 57.00 ,,

For further particulars, please apply to the Divisional Forest Officer, South Coorg, Mercara.

ಬಾಳೆಲೆ ಗ್ರಾಮಾಸ್ಪತ್ರೆ.

(ಬರೆದು ಬಂದಪ್ಪು.)

ಡಿಸ್ಟ್ರಿಕ್ಟ್ ಬೋರ್ಡಿನವರು ದಯಪಾಲಿಸಿದ ಗ್ರಾಮಾಸ್ಪತ್ರೆಯು ಬಾಳೆಲೆಯಲ್ಲಿ ಈ ತಾ. 12 ರಲ್ಲಿ ಮಧ್ಯಾಹ್ನನದ ಮೇಲೆ 2 ಗಂಟೆಗೆ ತೆರೆಯಲ್ಪಟ್ಟಿತು. ಸುತ್ತಮುತ್ತಲಿನ 9 ಗ್ರಾಮಗಳಿಂದ ಸುಮಾರು 400 ಜನರು ನೆರೆದಿದ್ದರು. ಕೆಲವು ಮಹಿಳೆಯರೂ ಬಂದಿದ್ದರು. ಆಲ್ಲದೆ ಕೆಲವು ಕೌನ್ಸಿಲು ಮೆಂಬರುಗಳೂ, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೂ, ಇಲ್ಲಿಗೆ ನೇಮಿಸಲ್ಪಟ್ಟ ಡಾ. ಚೆಂದ್ರಮೂಡ ಅಪ್ಪಯ್ಯನವರೂ ಹಾಜರಿದ್ದರು. ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರಾದ ಶ್ರೀ. ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅಧ್ಯಕ್ಷರನ್ನು ವಾದ್ಯಘೋಷದಿಂದ ಸ್ವಾಗತಗೊಂಡ ಮೇಲೆ ಸಭೆಯು ಪ್ರಾರಂಭವಾಯಿತು. ಕಟ್ಟಡ ಕಮಿಟಿಯ ಅಧ್ಯಕ್ಷರಾದ ಮತ್ತು ಸ್ಥಳೀಯ ಡಿ. ಬೋರ್ಡು ಮೆಂಬರಾದ ಮೆ. ಆಜ್ಜಿಗುಟ್ಟಿರ ಪೊನ್ನಪ್ಪನವರು-ಆಸ್ಪತ್ರೆ ದಯಪಾಲಿಸಿದಕ್ಕಾಗಿ ಡಿ. ಬೋರ್ಡಿನವರನ್ನೂ, ಆಸ್ಪತ್ರೆಯ ಹಂಗಾಮಿ ಕಟ್ಟಡ ಏರ್ಪಾಡಿಗೆ ಸಹಾಯಮಾಡಿದವರನ್ನೂ, ಖಾಯಂ ಕಟ್ಟಡಕ್ಕೆ ಧನ ಸಹಾಯ ವಾಗ್ದಾನ ಮಾಡಿದವರನ್ನೂ ವಂದಿಸಿ, ಕಟ್ಟಡದ ಹೆಚ್ಚಿನ ಹಣಕ್ಕೆ ಸಭಿಕರಲ್ಲಿ ವಿನಂತಿ ಮಾಡಿದರು. ಅದರಂತೆ ನೆರೆದಿದ್ದರಿಂದ ಸುಮಾರು ರೂ. 500ರ ವರಿಗೆ ವಾಗ್ದಾನ ದೊರೆಯಿತು. ನಂತರ ಅಧ್ಯಕ್ಷರು-ಡಿ. ಬೋರ್ಡಿನ ಆರ್ಥಿಕ ಹೀನಸ್ಥಿತಿಯನ್ನು ವಿವರಿಸಿ, ಈ ಅತ್ಯವಶ್ಯವಾದ ಆಸ್ಪತ್ರೆ ತೆರೆಯಲು ಉಂಟಾದ ಕಷ್ಟವನ್ನೂ, ಅದನ್ನು ಖಾಯಂ ಆಗಿ ನಡಿಸಲು ಇರುವ ಹಣದ ಅಭಾವದ ತೊಂದರೆಯನ್ನು ವರ್ಣಿಸಿ, ಹೇಗೂ ಹಂಗಾಮಿಯಾಗಿ ಪ್ರಾರಂಭಿಸಲ್ಪಟ್ಟ ಈ ಆಸ್ಪತ್ರೆಯು ಸರ್ವರ ಸಹಾಯದಿಂದ ಖಾಯಂ ಆಗಿ ನಡಿಸಲ್ಪಡಲಿ-ಎಂದು ಹೇಳಿ ಒಡ್ಡೋಲಗದ ಮಧ್ಯೆ ಆಸ್ಪತ್ರೆಯನ್ನು ತೆರೆದರು. ಹೊಸ ಡಾಕ್ಟರವರೂ, ಮೆ. ಗಳಾದ ಸಿ. ಯಂ. ಪೂಣಚ್ಚನವರು, ಕೆ. ಸಿ. ಕರುಂಬಯ್ಯನವರು ಮತ್ತು ಹೆಚ್. ಬಿ. ಸಿದ್ದಯ್ಯನವರು ಕೆಲವು ಮಾತುಗಳನ್ನಾಡಿದ ಮೇಲೆ ಮೆ. ಎ. ಎಸ್. ಪೊನ್ನಪ್ಪನವರು ಅಧ್ಯಕ್ಷರಿಗೂ, ಅತಿಥಿಗಳಿಗೂ ಧನ ಸಹಾಯದ ವಾಗ್ದಾನ ಮಾಡಿದವರಿಗೂ ಮತ್ತು ಸಭಿಕರಿಗೂ ವಂದಿಸಿದರು. ನಂತರ ತಂಡಿ ತೀರ್ಥಗಳಿಂದ ಸಭೆ ಬರಕಾಸ್ತಾಯಿತು.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦—

ಮಲೆದೇವರ ಭಂಡಾರ.

ಈ ಮೊದಲು ಕಡಿಯತ್ತುನಾಡು ಮಲೆದೇವರ ಭಂಡಾರದ ವಿಷಯದಲ್ಲು ಸ್ಥಳೀಯ 'ಕೊಡಗು' ಪತ್ರಿಕೆ ಮತ್ತು ಮಂಗಳೂರಿನ 'ಸ್ವತಂತ್ರ ಭಾರತ' ಪತ್ರಿಕೆಯಲ್ಲು ನಾಡು ತಕ್ಕ ಮತ್ತು ನಾಡಿಗೆ ಸಂಬಂಧಪಟ್ಟವರು ಮಲೆದೇವರ ಭಂಡಾರದ ವಿಷಯದಲ್ಲಿ ಕೊಂಚ ಗುಟ್ಟಿಗೆ ವಿವರಿಸಿದ್ದರು. ಸದರಿ ಭಂಡಾರದ ಆಡಳಿತೆಗಾರರು ತಾವಲ್ ವರೆಗೆ ಯಾವುದೊಂದು ಇತ್ಯರ್ಥದ ನಿಯಮವು ಕಂಡು ಬಾರದ್ದರಿಂದ ಸದರಿ ಕರಡ ಗ್ರಾಸುಕ್ಕೆ ಸಮ್ಮಂಧಪಟ್ಟಂತವರು ಇದನ್ನು ಪುನರಾವರ್ತಿ ಕೊಂಚನುಟ್ಟಿಗೆ ವಿವರಿಸಬೇಕಾಗಿದೆ. ಮಲೆ ದೇವರ ಉತ್ಪತ್ತಿ ಎಂದರೆ ವರ್ಷಾವಧಿ ಉತ್ತರದ ಹಣ 100 ರೂ. ಸನಿಮಪ. ದೇವರ ಭೂಮಿಯಲ್ಲು ವರ್ಷಾವಧಿ ಎರಡು ಗಾಡಿ ಭತ್ತ ಸಾವಿರ ಕಂತ್ಯೆ ಹುಲ್ಲು, ಚಿನ್ನ, ಬೆಳ್ಳಿ ಆಭರಣಗಳಲ್ಲದೆ ಭಂಡಾರದ ಕಾಣಿಕೆ ಹಣ ಕನಿಷ್ಟಪಕ್ಷ 250 ರೂಪಾಯಿ. ಈ ರೀತಿಯ ಉತ್ಪತ್ತಿಯಲ್ಲದೆ ಉತ್ಸವದ ದಿವಸ ಊರು ಮತ್ತು ನಾಡಿನ ಎತ್ತಿನ ಹೇರಾಟದಿಂದ ಜನಮೆಯೂದ ಆಕ್ಕಿ ಉತ್ಸವದ ಜನ ಸಂದಣಿಗೆ ಊಟ ಸಂತರ್ಪಣೆ ಕಳೆದು ಅರ್ಧ ಯೂ ಮುಕ್ಕಾಲು ಪಾಲು ಆಕ್ಕಿ. ಖರ್ಚಿನ ಬಾಬೆಂದರೆ ಪೂಜಾರಿಗೆ ವರ್ಷಾವಧಿ ರೂ. 60 ಸಂಬಳ, ನಿತ್ಯ ನೈವೇದ್ಯಕ್ಕೆ ಒಂದು ಮೂನ ಆಕ್ಕಿ, ಒಂದು ತೆಂಗಿನಕಾಯಿ ಇಂತಿಷ್ಟೆ. ಚಿಲ್ಲರೆ ಉತ್ಪತ್ತಿಯು ಚಿಲ್ಲರೆ ಖರ್ಚುಗಳಿಗೆ ಸಲ್ಲುತ್ತೆ. ಈ ಉತ್ಪತ್ತಿಯ ಭಂಡಾರವು ದೇವ ತಕ್ಕರಾದ ಚಿಟ್ಟೋಳಿಯಮ್ಮನ ಮನೆಯಲ್ಲಿ ಇಡುವಂತೆಯೂ, ಊರು ತಕ್ಕರಾದ ನಡಿಕ್ಕೇರಿಯಂಡ ಮನೆಯವರಲ್ಲಿ ಭಂಡಾರದ ಪೆಟ್ಟಿಗೆಯ ಬೀಗದ ಕೈ ಇಡುವಂತೆಯೂ ಬಹು ಕಾಲದ ನಡವಳಿಕೆ ಕಂಡು ಬರುತ್ತೆ ಇದೇ ಸಮ್ಮಂಧ ದೇವತಾ ಇನ್ನಿತರ ಕೆಲಸಗಳಿಗೆ ಹಣ ಅವಶ್ಯಕತೆ ಕಂಡು ಬಂದಲ್ಲು ಊರಿನ ಪ್ರತಿ ಕುಳದವರಿಗೆ ತಿಳಿಸಿ ಸರ್ವ ಸಮ್ಮತದಿಂದ ಹಣ ತೆಗೆಯುವ ಮತ್ತು ಇಡುವ ಜವಾಬ್ದಾರಿಕೆ ಮೇರೆ ನಡೆಯುತ್ತಿತ್ತು. ಆ ನಿಯಮಗಳೆಲ್ಲಾ ಬರಿದಾಗುವ ಚಿಹ್ನೆಗಳು ಕಂಡು ಬರುತ್ತವೆ. ಇದಕ್ಕೆಲ್ಲಾ ಕಾರಣಗಳೆಂದರೆ ಊರಿನವರ ಆರ್ಥಿಕ ಸ್ಥಿತಿಯನ್ನು ಕೊಂಚಮಟ್ಟಿಗೆ ವಿವರಿಸೋಣ. ಇಡೀ ಕೊಡಗು ದೇಶದಲ್ಲು ಕರಡ ಗ್ರಾಮದ ಒಂದು ಕುಳ ವಿನಹ ಹಾಲಿ ಕರಡ ಗ್ರಾಮದಲ್ಲು ವಾಸ ಇಲ್ಲದ ಜನರಲ್ಲದೆ ಇವರಷ್ಟು ಹೀನ ಸ್ಥಿತಿಯು ಇರುವ ಊರು ಬೇರೆ ಎಲ್ಲಿಯೂ ಇರಲಿಕ್ಕಿಲ್ಲವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಇದಕ್ಕೆಲ್ಲಾ ಕಾರಣಗಳೆಂದರೆ ವಿದ್ಯಾಹೀನತೆ ಮತ್ತು ಬಡತನ. ಇಡೀ ಭಾರತಭೂಮಿಯಲ್ಲಿ ಮಹಾತ್ಮಾಜ್ಞೆಯವರ ತತ್ವದ ಮೇರೆ ಐಕ್ಯಮತ್ಯ, ನಿಷಾ ನಿಷೇಧ, ಅಸ್ಪೃಶ್ಯ ನಿವಾರಣೆ ಅಹಿಂಸಾ ತತ್ವವು ಭರದಿಂದ ಸಾಗುತ್ತಿರುವಲ್ಲು ನಮ್ಮ ಊರವರಾದರೋ ಊರು ಸಮ್ಮಂಧ ಒಂದು ಮೀಟಿಂಗ್ ಏರ್ಪಡಿಸಬೇಕಾದರೆ ಸೇಂದಿ ಗಡಿಗೆಗಳೆರಡಾಗಬೇಕು. ಈ ಸಂತರ್ಪಣೆಗಳಿಂದ ಮೀಟಿಂಗು ನಡಿಸುವಲ್ಲು ಲಾಗ ಹಾಕೋಮುಂಗಣ್ಣು ಥೈ, ಥೈ ಕುಣಿಯೋ ತಿಮ್ಮಣ್ಣಾ ಎಂದು ವಿನೋದಿಸುತ್ತಾ ದೀರ್ಘಾಲೋಚನೆ ಪರಾವು ಒಂದನ್ನು ತಂದದ್ದೇ ತಡ. ಸರ್ವ ಸಮ್ಮತದಿಂದ ಬಸವಣ್ಣನ ರೀತಿ ತಲೆಯಲ್ಲಾಡಿಸಿಯೇ ಬಿಟ್ಟರು. ಒಬ್ಬಿಬ್ಬರು ಸ್ವಲ್ಪ ಎಚ್ಚರಿಕೆಯಿಂದ ಊರಿನ ಬಡತನವನ್ನು ಹೇಳಿಕೊಂಡರೆ, ಮುಂದೊಳುಗಳು ಇದೇನ್ನು ದೊಡ್ಡ ಆಗಾಧ. ನಿಮ್ಮ ಬಡತನವನ್ನು ನಿರ್ಮೂಳ ಮಾಡಲು ನಮ್ಮ ದೇವರ ಭಂಡಾರವಲ್ಲು ಯಥೇಚ್ಛ ಹಣ ಇದೆ. ನಮ್ಮ ಊರಿನ ಬಡತನ ನಿವಾಸಿಸುವುದಕ್ಕಾಗಿ ಎಷ್ಟು ರೂಪಾಯಿ ಬೇಕಾದೀತು? ಹೆಚ್ಚೆಂದರೆ ಅಂದಾಜು 2 ಸಾವಿರ ರೂಪಾಯಿ. ಇವತ್ತಿಗೆ 15 ದಿನದಲ್ಲಿ ನಿಮ್ಮ ನಿಮ್ಮ ಸಾಲ ಮೂಲಗಳ ಪಟ್ಟಿಗಳನ್ನೆಲ್ಲಾ ತಯಾರಿಸಿ ಸಿದ್ಧರಾಗಿರಿ. ಎಂಬ ಹಂಬಲವೂ ಆಯಿತು. ಹಾತೊರೆಯುತ್ತಿರುವ ಊರವರು ಆ ದಿನ ಕ್ಲಿಪ್ತ ಕಾಲಕ್ಕೆ ಮುಂಚೆಯೇ ಹಾಜರಾಗಿ ಕೂತು ಕೂತು ಬೇಸತ್ತ ಸಮಯದಲ್ಲು ಈ ಚಿನ ದೇಹಾಲಸ್ಯದಿಂದ ಬರಲನುಕೂಲವಿಲ್ಲವೆಂಬ ಒಂದೇ ಉತ್ತರ. ಇನ್ನೊಂದು ದಿನದ ನಿಶ್ಚಯ. ಅಂದೂ ಹೀಲ್ಕುಂಡಂತೆಯೇ ಗ್ರಾಮಬಲ್ಲಿ ಹಾಜರಿರಲಿಕ್ಕಿಲ್ಲ. ಬೇರೊಂದು ದಿನ ಎಲ್ಲರೂ ಒಕ್ಕಟ್ಟಿನಿಂದ ಎದುರುಗೊಂಡು ಸಂಕಟದಿಂದ ಹೇಳಿಕೊಂಡರೆ ನಿಮ್ಮ ಗಲಾಟೆಯೇ ನನಗೆ ಬೇಡ. ಇದೆಲ್ಲ ವಿಪರೀತ ತೊಂದರೆಯ ಕೆಲಸ. ಸಾಧ್ಯವಿಲ್ಲದ ಸಂಗತಿಯೆಂದು ಭಾಷಣಯಿತ್ತರು. ಬಡ ಊರವರು ಅತೃಪ್ತಿಕರವಾದ ಉತ್ತರ ಕೇಳಿ ನಿರಾಶೋಚದಿಂದ ಭಂಡಾರದ ಹಣದ ಲೆಕ್ಕಾಚಾರಗಳನ್ನು ಕೇಳಿದ್ದೇ ಆದರೆ ನೀನು ಕೇಳಲಿಕ್ಕೆ ಯಾರು? ನಿನಗೇನು ಅಧಿಕಾರವೆಂದು ಘರ್ಜಿಸಿ ಘಂಟಾಘೋಷವಾಗಿ ಆಲಾಪನೆ ಹೊರಡಿಸಿಯೇ ಬಿಡುತ್ತಾರೆ. ಪಾಪದ ಊರವರಾದರೋ (ಪಾಂಬ್ರೆ ಮುಂಡಿಕ್ ಪರ ಬೆಚ್ಚನ್ನೆಕೆ) ತಲೆ ತಗ್ಗಿಸಿಯೇ ಬಿಟ್ಟರು. ಈ ರೀತಿಯ ಕೂಪಕೂರ್ಮದಂತಿದ್ದಾರೆ. ಆ ಡಳಿತಗಾರರಿಗೆ ಹಣದ ಆವಶ್ಯಕತೆ ಏನಾದರೂ ತೊರಿ ಬಂದಲ್ಲಿ ದಾರಿಯಲ್ಲುಯಾವನೋ ಒಬ್ಬ ಊರವನನ್ನು ಕರೆದು ಭಂಡಾರತಕ್ಕನೋರ್ವನನ್ನು ಸಹ ಜೊತೆಯಿಂದ ಬೀಗ ತೆಗೆದು ಆವಶ್ಯವಿರುವ ಹಣ ಸಾಲ ವಗೈರೆ ಕೊಡುವದು ಸಹ ಭರದಿಂದ ಸಾಗುತ್ತಿದೆ ಎಂಬ ವದಂತಿ ಸಹ ಕೇಳಿಬರುತ್ತದೆ. ಅಲ್ಲದೆ ಇದೇ ಕಳೆದ ಉತ್ಸವದ ನಂತರ ಯಾರೋ ಪುಣ್ಯಾತ್ಮರು ಸದರಿ ದೇವರ ಭಂಡಾರಕ್ಕೆಂದು 100 ರೂ. ಕಳುಹಿಸಿದಂತೆಯೂ ಆ ವರ್ತಮಾನವು ಊರವರಿಗೆ ಸಹ ತಿಳಿಯದೆ ಗೋಪ್ಯವಾಗಿದೆಯೆಂಬ ವದಂತಿ ಸಹ ಕೇಳಿ ಬರುತ್ತೆ. ಪೂರ್ವಕಾಲದ ಮೊಗಲಾಯರ ಕಾಲದಲ್ಲು ಸಹ ಈ ತೆರನಾದ ದಬ್ಬಾಳಿಕೆಗಳಿರಲಿಲ್ಲವೆನ್ನಬಹುದು. ಇದು ಇನ್ಯಾವ ತರದ ದಬ್ಬಾಳಿಕೆಯೋ ದೇವರೇ ಬಲ್ಲ. ಆದ್ದರಿಂದ ಮಹಾ ಆಡಳಿತೆಗಾರರೇ ಇನ್ನಾದರೂ ಜನಮೆಚ್ಚುಗೆಗೆ ಮನವಿಟ್ಟು ಹಿಂದುಳಿದ ಲೆಕ್ಕಾಚಾರ ಮತ್ತು ಹಾಜರಿರುವ ಲೆಕ್ಕಾಚಾರಕ್ಕೂತಕ್ಕ ಸಂಸ್ಥೆಯನ್ನು ಏರ್ಪಡಿಸಬೇಕಲ್ಲದೆ ಒಂದಕ್ಕೆರಡಾಗದ ರೀತಿ ದೇಶಮತ್ತು ನಾಡು ಊರವರ ಕೇಳ್ವಿಕೆಗೆ ಗಮನವಿಟ್ಟು ಇನ್ನು ಮುಂದರಿಸದ ರೀತಿಗೆ ಆಸ್ಪದ ಕೊಡುವಿರಾಗಿ ಕೇಳಿಕೊಳ್ಳುವ.

'ಸಮ್ಮಂಧಪಟ್ಟ ಊರವರು.'

ಕೊಡಗನ್ನು ಕುರಿತು ಹರಿಪುರ ಠರಾವು.

'ಕೊಡಗಿನ ಜನರ ಮೇಲೆ ಇದು ಬಂಧಿತವಾದದ್ದಲ್ಲ, ದೇಶದ ಭವಿಷ್ಯವನ್ನು ಜನತೆಯೇ ನಿಶ್ಚಯಿಸತಕ್ಕದ್ದು' ಎಂದು

ವರ್ಕಿಂಗ್ ಕಮಿಟಿಯ ಅಭಿಪ್ರಾಯ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿ ಟಿಯ ಪರ, ಡೆಲ್ಲಿಯಲ್ಲಿ ನಡೆದ ಕಾಂಗ್ರೆ ಸ್ ವರ್ಕಿಂಗ್ ಕಮಿಟಿ ಮಿಟಿಂಗಿಗೆ, ಕೊ ಡಗಿಗೆ ಭವಿಷ್ಯತ್ತನ್ನು ಕುರಿತ ಹರಿಪುರ ಕಾಂಗ್ರೆಸ್ ಮಹಾ ಸಭೆಯ ಠರಾವಿನ ವಿ ಷಯ ತಾರೀಕು 23–9–38ರಲ್ಲಿ ಡೆ ಪ್ಯುಟೇಶನ್ ಹೋಗಿದ್ದ ವಿಷಯ ತಿಳಿಯ ಲು ನಮ್ಮ ದೇಶೀಯರು ಕುತೂಹಲರಾಗಿ ದ್ದು ಸಹಜ.

ಡೆಪ್ಯುಟೇಶನಿನವರು ಡೆಲ್ಲಿಯಲ್ಲಿ ವ ರ್ಕಿಂಗ್ ಕಮಿಟಿಯವರ ಭೇಟಿ ಮಾಡಿ ಕೊಡಗಿನ ರಾಜಕೀಯ ಸ್ಥಿತಿಗತಿಗಳನ್ನು ಸಾಲಂಕುಶವಾಗಿ ವಿವರಿಸಿದನಂತರ ವ ರ್ಕಿಂಗ್ ಕಮಿಟಿಯವರು ಕೊಟ್ಟ ತೀರ್ಮಾ ನವನ್ನು ಸೆಕ್ರೆಟರಿಯವರಾದ ಶ್ರೀಯುತ ಕೃಪಾಲಿನಿಯವರು ಡೆಪ್ಯುಟೇಶನಿನವರಿಗೆ ಗ್ಯೆ ಬಾಯಿ ಮಾತಿನಲ್ಲಿ ತಿಳಿಸಿದಂತೆ ವರು ಡೆಲ್ಲಿಯಿಂದ ವಾಪಸು ಬಂದ ಕೂ ಲೆ ಇದೇ ಪತ್ರಿಕೆಯಲ್ಲಿ ಪ್ರಕಟಿಸಲಾಗಿ ದೆ. ಅಲ್ಲದೆ ವರ್ಕಿಂಗ್ ಕಮಿಟಿಯ ಮಿಟಿಂಗ್ ಸಮಯದಲ್ಲಿ ಸದರಿ ಕಮಿಟಿ ಯ ತೀರ್ಮಾನವನ್ನು ಬರವಣಿಗೆಯಲ್ಲಿ ಕೊಡಲು ಸಮಯ ಸಂಕೋಚವಾದ ಕಾ ರಣ ಅಲ್ಲಿಯ ಮಿಟಿಂಗು ಮುಗಿದ ಕೂಡ ಲೇ ಕೊಡಗಿನ ಕಾಂಗ್ರೆಸ್ ಕಮಿಟಿಗೆ ಬರೆ ದು ಕಳುಹಿಸುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಆದರೆ ತಾ. 15–10–38 ರವರೆಗೆ ಅವರ ಪತ್ರವೇನೂ ಬಾರದ ಕಾ ರಣ ನಾನು ಅವರಿಗೆ ಈ ವಿಚಾರವಾಗಿ ಒಂದು ಪತ್ರ ಬರೆಯಬೇಕಾಗಿ ಬಂತು. ನಕ್ಕೆ ಉತ್ತರವಾಗಿ ಶ್ರೀಯುತ ಕೃಪಾಲಿ ನಿಯವರಿಂದ ನನಗೆ ಬಂದ ಪತ್ರದ ತರ್ಜು ಮೆಯನ್ನು ಈ ಕೆಳಗೆ ಕೊಡಲಾಗಿದೆ.

ಐ. ಪಿ. ಕಾರ್ಯಪ್ಪ,
ಪ್ರೆಸಿಡೆಂಟ್,
ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ.

ಅಖಿಲಭಾರತ ಕಾಂಗ್ರೆಸ್ ಕಮಿಟಿ,
ಸ್ವರಾಜ್ಯ ಭವನ, ಅಲಹಾಬಾದ್,
ಅಕ್ಟೋಬರ್ 27, 1938.

ಶ್ರೀಯುತ ಐ. ಪಿ. ಕಾರ್ಯಪ್ಪ,
ಪ್ರೆಸಿಡೆಂಟ್,
ಜಿಲ್ಲಾ ಕಾಂಗ್ರೆಸ್ ಕಮಿಟಿ,
ಸಿದ್ದಾಪುರ, ಕೊಡಗು.

ಮಾನ್ಯರೇ,

ನಿಮ್ಮ ತಾ. 15–10–38ರ ಪತ್ರದ ಲ್ಲಿ, ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿ ಟಿಯ ಸೆಕ್ರೆಟರಿಯವರಿಗೆ, ಕೊಡಗು ಪ್ರತ್ಯೇಕ ಪ್ರಾಂತ್ಯದ ವಿಷಯ ವಿಚಾರದಲ್ಲಿ ವರ್ಕಿಂಗ್ ಕ ಮಿಟಿಯ ತೀರ್ಮಾನವನ್ನು ಸೂಚಿಸಿ, ನಾ ನು ಡೆಲ್ಲಿಯಿಂದ ಬರೆದ ಕಾಗದದ ಬಗ್ಗೆ ನಿಮ್ಮ ಅವಗಾಹನೆಯನ್ನು ತರಬೇಕಾಗಿ ದೆ. ಅವರಿಗೆ ಬರೆದ ಕಾಗದದ ನಕಲೊಂ ದನ್ನು ನಿಮ್ಮ ಅವಲೋಕನ ಬಗ್ಗೆ ಇದ ರೊಂದಿಗೆ ಕಳುಹಿಸಿರುವೆನು.

ನಿಮ್ಮವನಾದ,
'ಜೆ. ಬಿ. ಕೃಪಾಲಿನಿ.

ಮೊಖಾಂ, ಡೆಲ್ಲಿ.
6–10–'38

ಸೆಕ್ರೆಟರಿಯವರಿಗೆ,
ಜಿಲ್ಲಾ ಕಾಂಗ್ರೆಸ್ ಕಮಿಟಿ,
ಮಡಿಕೇರಿ, ಕೊಡಗು.

ಮಾನ್ಯರೇ,

ವರ್ಕಿಂಗ್ ಕಮಿಟಿಯ ವಿಲೋಚನೆಗೆ ಬಿಟ್ಟಿದ್ದ ಕೊಡಗಿನ ಸಮಸ್ಯೆಯ ಬಗ್ಗೆ ವ ರ್ಕಿಂಗ್ ಕಮಿಟಿಯವರ ಈ ಕೆಳಗಿನ ತೀ ರ್ಮಾನವನ್ನು ತಮಗೆ ತಿಳಿಸುತ್ತೇನೆ.

'ಹರಿಪುರ ಕಾಂಗ್ರೆಸ್ ಅಧಿವೇಶನದ ಲ್ಲಿ ಕೊಡಗಿನ ಬಗ್ಗೆ ಪಾಸಾದ ಠರಾವಿನ ವಿವರಣೆಯ ವಿಚಾರ ಕೊಡಗಿನ ಕೆಲವು ಕಾಂಗ್ರೆಸ್ ಜನರು ಕೇಳಿಕೊಂಡದ್ದರಿಂದ ಕಮಿಟಿಯು ಮದ್ರಾಸಿನೊಡನೆಸೇರಬೇಕೆಂ ಬ ಠರಾವು ಪರವಾನಿಗೆ(Permissive) ಯೆ ರೂಪದ್ದಾಗಿದೆ ಎಂದು ಅಭಿಪ್ರಾಯಪ ಟ್ಟರುವರು. ಕಾಂಗ್ರೆಸ್ ಜನರು ಕೊಡ ಗು ಪ್ರತ್ಯೇಕ ಪ್ರಾಂತ್ಯವಾಗಿರಬೇಕೆಂದು ಪ್ರತಿಪಾದಿಸಲು ಯಾವ ತೊಡಕೂ ಇಲ್ಲ. ಆದಾಗ್ಯೂ ಸದ್ಯಕ್ಕೆ ಕಾಂಗ್ರೆಸ್ಸಿನವರು ಯಾ ವುದೊಂದು ವಿಧದ ಚಳವಳನನ್ನು ಮಾಡು ವ ಅಗತ್ಯವಿಲ್ಲವೆಂದೂ, ಸ್ವಾತಂತ್ರ್ಯ ಸಿಕ್ಕಿ ದೊಡನೇ ಪ್ರಾಂತಗಳ ಸುಧಾರಣಾ ಸ ಮಸ್ಯೆಗೆ ಜನಾಂಗದ ದೃಷ್ಟಿಯು ಬೀಳು ವದೆಂದೂ ಕಮಿಟಿಯು ಅಭಿಪ್ರಾಯ ಪ ಟ್ಟರುವದು. ಆಂತೂ ಯಾವ ಪರಿಸ್ಥಿತಿ ಯಲ್ಲಿಯೂ ಕೂಡ ಕೊಡಗಿನ ಕಾಂಗ್ರೆಸಿ ನವರಿಂದ 1935ನೇ ಆಕ್ಟನ್ನು ಆಂಗೀಕರಿ ಸುವ ಚಳವಳವು ನಡಿಸಲ್ಪಡಕೂಡದು.

ಕಾಂಗ್ರೆಸ್ ತತ್ವಕ್ಕನುಗುಣವಾಗಿ ಒಂದು ಅಧೀನ ಕಮಿಟಿಯು ಪ್ರಾಂತೀಕ ಕಮಿಟಿಯೊಡನೆ ಸಹಕಾರದಿಂದ ವರ್ತಿಸ ಬೇಕು ಎಂಬದನ್ನು ನೀವು ತಿಳಿಯಿರಿ. ಆದ್ದರಿಂದ ನೀವು ಮಾಡುವ ಇನ್ನಾವ ಕಾರ್ಯದಲ್ಲಿಯೂ ದಯವಿಟ್ಟು ಕರ್ನಾ ಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಆಲೋಚನೆಯನ್ನು ತೆಗೆದುಕೊಳ್ಳಿ. ಅಲ್ಲಿ ಭಿನ್ನಾಭಿಪ್ರಾಯವಿದ್ದರೆ ನನಗೆ ಅದೆನ್ನು ಬರೆಯಬಹುದು.

ನಿಮ್ಮವನಾದ,
ಜೆ. ಬಿ. ಕೃಪಾಲಿನಿ.

ಸಾರ್ವಜನಿಕ ಸಭೆ.

ಪೊನ್ನಂಪೇಟೆನಾಡು ಬಾಳೆಲೆ ಗ್ರಾಮ ದಲ್ಲಿ ತಾ. 23–11–38ರಲ್ಲಿ ಬಾಳೆಲೆ ಸ್ಕೂಲ್ ಬಳಿ ಶ್ರೀಯುತ ಕೆ. ಸಿ. ಕರುಂ ಬಯ್ಯ ಯಂ. ಎಲ್. ಸಿ. ಯವರ ಅಧ್ಯ ಕ್ಷತೆಯಲ್ಲಿ ದೇವನೂರು ಬಾಳೆಲೆ ಬಿಳೂ ರು, ನಿಟ್ಟೂರು ಕೊಟ್ಟಗೇರಿ, ಬೆಸಗೂರು ಬೆಕ್ಕೆಸೊಡ್ಲೂರು, ಕಾನೂರು, ನಲ್ಲೂರು 9 ಗ್ರಾಮದವರು, ನಡಿಸಿದ ಸಾರ್ವಜನಿಕ ಸಭೆಯ ವಿವರ.

1. ಬಾಳೆಲೆಯಲ್ಲಿ ಒಂದು ರೂರಲ್ ಆಸ್ಪತ್ರೆಯನ್ನು ತೆರೆಯಲು ಕೊಡಗು ಡಿ. ಬೊ. ಪ್ರೆಸಿಡೆಂಟರ ನಂ 4806ರ 7–11–38 ಹುಕುಮನ್ನು ನಮ್ಮ ನಾಮನಿ ಡಿ. ಬಿ. ಮೆಂಬರರಾದ ಶ್ರೀ. ಅಜ್ಜಿಗುಟ್ಟಿರ ಪೊನ್ನಪ್ಪನವರು ಓದಿ ಹೇಳಿ ಆಸ್ಪತ್ರೆಗೆ ಬೇಕಾಗುವ ಮನೆ ಸಾಮಾನುಗಳ ವಿಷಯ ವನ್ನು ವಿವರಿಸಿದರು.

2. ಆಸ್ಪತ್ರೆಗೆ ಆವಶ್ಯಕವಿರುವ ಸಾ ಮಾನುಗಳನ್ನು ಈ ಕೆಳಗೆ ಕಾಣಿಸಿದ ಘ ನಾನೀಯರು ಕೊಡಲಿಕ್ಕೆ ಒಪ್ಪಿದರು. ಶ್ರೀ. ಗಳಾದ ಪೋಡಮಾಡ ಚಂಗಪ್ಪನವರು ಹಂ ಚು ಹಾಕಿದ ಮನೆ (ಹಂಗಾಮಿಯಾಗಿ), ಪಾರುವಂಗಡ ಗಣಪತಿಯವರು ಅಡಿಗೆಮನೆ, ಪಾರುವಂಗಡ ನಂಜಪ್ಪನವರು ಕುರ್ಚಿ ಮೇಜು, ಬೆಂಚು, ಮೂಪಂಗಡ ಚಂಗ ಪ್ಪನವರು ಕುರ್ಚಿ, ಚೀಕಪೂವಂಡ ಮೇ ದಪ್ಪನವರು ಬೆಂಚು, ಅರಮಣಮಾಡ ಸೋಮೈಯ್ಯನವರು, ಪಾರುವಂಗಡ ಕಾ ಳೈಯ್ಯನವರು ಆಲ್‌ಮೈರ ಮೂಡಲಿಕ್ಕೆ ಮರ, ಕಳ್ಳಿಚಂಡ ದೇವೈಯ್ಯನವರು ಮಂಚ, ಕಳ್ಳಿಚಂಡ ಕುಟ್ಟಪ್ಪನವರು ಡ್ರಾ ಮೇಜ, ಸಣ್ಣುವಂಡ ಕುಶಾಲಪ್ಪ ನವರು ಕುರ್ಚಿ ಕೊಡಲಿಕ್ಕೆ ಒಪ್ಪಿದರು.

3. ಹಳೆ ಕಟ್ಟಡ ರಿಪೇರಿ ಮತ್ತು ಆ ಸ್ಪತ್ರೆ ಸಾಮಾನುಗಳಿಗಾಗಿ ಶ್ರೀ. ಗಳಾದ ಅಜ್ಜಿಗುಟ್ಟಿರ ಪೊನ್ನಪ್ಪನವರು, 5 ರೂಪಾ ಯಿಯನ್ನೂ ಆಪೇಂಗಳ ಕುಶಾಲಪ್ಪನವ ರು, ಆಪೇಂಗಳ ತಿಮ್ಮೈಯ್ಯನವರು, ಆ ಪೇಂಗಳ ಮಾಚ್ಚಿಯ್ಯನವರು, ಪೋಡಮಾ ಡ ನಾಣ್ಯೆಯ್ಯನವರು, ಪೋಡಮಾಡ ಕಾ ರ್ಯಪ್ಪನವರು, ಅಡ್ಡೇಂಗಳ ಕುಶಾಲಪ್ಪ ನವರು, ಸಣ್ಣುವಂಡ ಕುಶಾಲಪ್ಪನವರು, ಮುಲ್ಲಂಡ ಸುಬ್ಬೈಯ್ಯನವರು ಮತ್ತು ಮೂ ಪಂಗಳ ನಂಜಪ್ಪನವರು. 2 ರೂ. ಕೊಳತ್ತೆ ಯೂ, ಆಪೇಂಗಳ ತಮ್ಮೈಯ್ಯನವರು, ಕಾಂ ಡೇರ ಬೋಳ್ಳೆಯ್ಯನವರು, ಕಾಂಡೇರ ಸು ಬ್ಬೈಯ್ಯನವರು, ಕಾಂಡೇರ ಮಾಜ್ಜಿಯ್ಯನ ವರು, ಕಾಂಡೇರ ಕೆ. ಸುಬ್ಬೈಯ್ಯನವರು, ಬಲ್ಲಿಮಾಡ ನಂಜಪ್ಪನವರು, ಬ್ಯಾ. ನರ ಹಿಂಹ ಮೂರ್ತಿರಾವ್, ಬ್ಯಾ. ಸೀತಾರಾ ಮೈಯ್ಯನವರು, ಕೊಕ್ಲೆಮಾಡ ಕುಟ್ಟಪ್ಪನ ವರು, ಕಳ್ಳಿಚಂಡ ಕುಶಾಲಪ್ಪನವರು, ಅ ಡ್ಡೇಂಗಳ ಐಯ್ಯಮ್ಮನವರು, ಅಡ್ಡೇಂಗಳ ತಿಮ್ಮೈಯ್ಯನವರು, ಅಳ್ಮೆಂಗಳ ಮುತ್ತಣ್ಣ ನವರು, ಅಳ್ಮೆಂಗಳ ಬೆಳ್ಯಪ್ಪನವರು, ಅರ ಮಣಮಾಡ ಪೆಂಮೈಯ್ಯನವರು, ಮಂಡೆ ಮಾಡ ಪರಿಯಪ್ಪನವರು, ಮುಲ್ಲಮಾಡ ಭೀಮೈಯ್ಯನವರು, ಮೇಚಂಡ ನಂಜಪ್ಪ ನವರು, ಅಜ್ಜಿಗುಟ್ಟಿರ ತಿಮ್ಮೈಯ್ಯನವರು, ಚೆಟ್ಟಿಮಾಡ ಭೀಮೈಯ್ಯನವರು, ಕೊಕ್ಕೆಂ ಗಳ ತಿಮ್ಮೈಯ್ಯನವರು, ಕೊಕ್ಕೆಂಗಳ ಮೇ ದಪ್ಪನವರು, ಪಾರುವಂಗಳ ತಿಮ್ಮೈಯ್ಯನ ವರು, ತಿರುಕೆಜೇರಿರ ಪೊನ್ನಪ್ಪನವರು, ಅಗಸರ ಬೊಳ್ಳಿಂಗನವರು, ತಾಣಜೀರ ಬಿದ್ದಯ್ಯನವರು ಮತ್ತು ಪಾರುವಂಗಡ ಗಣಪತಿಯವರು 1 ರೂ. ಯಂತೆಯೂ ಅಂತು ಜುಮ್ಲ ರೂ. 50 ಧನ ಸಹಾಯ ಮಾಡಿದರು.

4. ಕಾಯಂ ಆದ ಹೊಸ ಕಟ್ಟಡ ಕ ಟ್ಟಿಸಲು ಶ್ರೀ. ಪೋಡಮಾಡ ನಾಣ್ಯೆಯ್ಯನ ವರು, ಬಾಳೆಲೆ ಸ್ಕೂಲ್ ಬಳಿ ೪ ಏಕರೆ ಜಾಗವನ್ನು ದೇವನೂರು ಗ್ರೈನ್ ಬ್ಯಾಂಕಿ ನ ಮೆಂಬರರು ದೊಡ್ಡಮನೆ ಸಂಕಷ್ಟ ವಲ್ಲು ಡಿಪಾಜಿಟ್ಟಿಗೆ ಇಟ್ಟ 1500-0-0 ರೂಪಾಯಿಗಳನ್ನು ಉದಾರತ್ವವಾಗಿ ಕೊ ಡಲು ಒಪ್ಪಿಕೊಂಡಿದ್ದಕ್ಕಿಂತ ಸದರಿ ಬ್ಯಾಂ ಕಿನವರಿಗೆ ಚಂದನೆಯಿಂದ ಸ್ವೀಕಾರಮಾಡಿ ದ್ದಲ್ಲದೆ ಅವರ ಸಂಗಡ ಪತ್ರವ್ಯವಹಾರ ನ ಡಿಸಿ ಸದರಿ ಮೊಬಲಗನ್ನು ಹೊಂದಿಕೊಂ ಡು ಕಟ್ಟಡದ ಕೆಲಸ ಸುರುಮಾಡಿಸಲು ತೀರ್ಮಾನವಾಯಿತು.

5. ಆಸ್ಪತ್ರೆ ಕಟ್ಟಡಕ್ಕಾಗಿ 50-0-0 ರೂಪಾಯಿ ಯೂ, ಹೆಚ್ಚಾಗಿ ಕೊಡುವ ಮ ಹನೀಯರ ಹೆಸರುಗಳನ್ನು ಕಲ್ಲಿನಲ್ಲಿ ಇ ಡುವ ಹಾಗು ಐದು ರೂಪಾಯಿ ಯೂ ಹೆಚ್ಚಾಗಿ ಕೊಡುವ ಮಹನೀಯರ ಹೆಸರ ನ್ನು ಪ್ರಿಂಟ್ ಮಾಡಿಸಿ ಸದರಿ ಪಟ್ಟಿಯ ನ್ನು ಖಾಯಂಆಗಿ ಕನ್ನಡಿ ಫ್ರೇಮ್ ಕ ಟ್ಟಿಸಿ ಇಡುವಂತೆ ತೀರ್ಮಾನಿಸಲಾಯಿತು.

ಸ್ಥಳಕೊಟ್ಟ ಮಹನೀಯರ ಹೆಸರ ನ್ನು ಕಟ್ಟಡ ಕಟ್ಟಲಿಕ್ಕೆ ಹಣ ಕೊಟ್ಟ ದೇ ವನೂರು ಗ್ರೈನ್ ಬ್ಯಾಂಕಿನ ಹೆಸರನ್ನು ಸ ದರಿ ಕಲ್ಲಿನಲ್ಲಿ ಬರೆದಿಡುವಂತೆ ತೀರ್ಮಾನಿ ಸಲಾಯಿತು.

6. ಶ್ರೀ. ಪಾರುವಂಗಡ ಯಸ್. ನಂ ಜಪ್ಪನವರು ಮತ್ತು ಶ್ರೀ. ಕಾಂಡೇರ ಬೋಳ್ಳೆಯ್ಯನವರು ಸಹ ಐವತ್ತು, ಐವ ತ್ತು ರೂಪಾಯಿಯನ್ನು ಕೊಡಲು ಒಪ್ಪಿದರು.

7. ವಸೂಲಾತಿ ವಿಷಯಕ್ಕೆ ಗ್ರಾಮ ಕ್ಕೆ ಇಬ್ಬರಂತೆ ಕಮಿಟಿಗಳನ್ನು ನೇಮಿಸ ಲಾಯಿತು.

8. ಆಸ್ಪತ್ರೆ ಹೊಸ ಕಟ್ಟಡಕ್ಕೆ ಈ ಕೆ ಳಗಿನ ಮಹನೀಯರುಗಳನ್ನು ಕಟ್ಟಡ ಕ ಮಿಟಿಯಾಗಿ ನೇಮಿಸಲಾಗಿದೆ.

ಶ್ರೀ. ಗಳಾದ ಪೋಡಮಾಡ ಚಂಗ ಪ್ಪನವರು (ಖಜಾನ್ಜಿ) ಆಪೇಂಗಡ ತಂ ಮೈಯ್ಯನವರು, ಪಾರುವಂಗಡ ನಂಜಪ್ಪ ನವರು, ಅಜ್ಜಿಗುಟ್ಟಿರ ಪೊನ್ನಪ್ಪ (ಅಧ್ಯ ಕ್ಷರು) ಬಲ್ಲಿಮಾಡ ನಂಜಪ್ಪನವರು ಸೆ ಕ್ರೆಟರಿಯವರಾಗಿಯು ನೇಮಿಸಲಾಯಿತು.

9. ದೇವನೂರು, ಬಾಳೆಲೆ, ನಿಟ್ಟೂರು, ಕೊಟ್ಟಗೇರಿ, ಕಾನೂರು, ನಲ್ಲೂರು, ಬೆ ಕ್ಕೆಸೊಡ್ಲೂರು, ಬೆಸಗೂರು, ಬಿಳೂರು ಗಾ ಮಗಳಿಗೆ ಮಳೆಯಿಲ್ಲದೆ ಬತ್ತದ ಬೆಳೆಯು ಬಹಳ ಕಡಿಮೆಯಾಗಿ ಇರುವುದರಿಂದ ಕಡಿ ಮೆ ಪಕ್ಷ 30000 ರೂಪಾಯಿಗಳನ್ನು ಖರ್ಚು ಮಾಡಿ ನೀರು ಸರಬರಾಯಿ ಮಾ ಡುವ ಏರ್ಪಾಡು ಮಾಡಬೇಕಾಗಿಯು ತಡ ಮಾಡಿದರೆ ಕಂದಾಯವನ್ನು ಪಾವತಿ ಮಾ ಡದ ಸಂದರ್ಭವು ಬರಬಹುದಾಗಿಯೂ ಸ ರ್ವಸಮ್ಮತದಿಂದ ತೀರ್ಮಾನಿಸಲಾಯಿತು.

ಇಲ್ಲಿಗೆ ಬಂದು ಆಸ್ಪತ್ರೆಯನ್ನು ಕೊ ಟ್ಟ ಡಿ. ಬೋರ್ಡಿನವರಿಗೂ ಈ ವಿಷಯದ ಲ್ಲಿ ತೊಂದರೆಯನ್ನು ತೆಗೆದುಕೊಂಡ ಎಗ್ಸಿ ಕ್ಯುಟಿವ್ ಇಂಜಿನೀಯರಿಂಗ್ ಸಾಹೇಬರಿ ಗೂ ವಂದನೆಯನ್ನು ಅರ್ಪಿಸುವಂತೆ ಸರ್ವ ಸಮ್ಮತದಿಂದ ತೀರ್ಮಾನಿಸಲಾಯಿತು.

ಅಧ್ಯಕ್ಷರ ಭಾಷಣದ ನಂತರ ಎಲಾ ಮಹನೀಯರಿಗೂ ವಂದಿಸಿ ಸಭೆಯನ್ನು ಮುಕ್ತಾಯ ಮಾಡಲಾಯಿತು.

ಪ್ರ ಕ ಟ ಣೆ .

ಇವರಿಂದ ಸಮಸ್ತ ಜನರಿಗೆ ತಿಳಿಸುವುದೇನೆಂದರೆ–

ಪೊನ್ನಂಪೇಟೆ ನಾಡು ಕೊಡಗೂರು ಗ್ರಾಮದ ಪೌತಿ ಪದಾರ್ಥಿ ಕೃಷ್ಣಯ್ಯನವರು ಅನೇಕ ಲೇವಾದೇವಿ ಮಾಡುತ್ತಾ ಸದರಿಯವರಿಗೆ ಲಿಖಾವಟ್ಟುಗಳ ಮೇಲೂ ಡಿಕ್ರಿಗಳ ಮೇಲೂ ಹೊರಗಿನಿಂದ ಉದ್ರಿಯು ಬರತಕ್ಕದಿದೆ. ಇವರು ಪೌತಾಗುವ ಮುಂಚೆ ತಾ. 17-2-1936ರ ರಿಜಿಸ್ಟ್ರಿ ವಿತಾನಾಮೆ ಪ್ರಕಾರ ಅವರ ಬಾಬ್ತು ಸಮಸ್ತ ಸ್ಥಿರ ಚರ ಸೊತ್ತುಗಳು, ಲೇವಾದೇವಿಗಳು ವಗೈರೆ ಅವರ ಹೆಂಡತಿಯೂ ಆದ ನನಗೂ, ನನ್ನ ಮರುದಿನಕ್ಕೆ ಅವರ ಮಗ ಪೊನ್ನಮ್ಮಯ್ಯನಿಗೂ ಸಹ ಹಕ್ಕಾಗಿರತಕ್ಕಂತೆ ಬದಾಗಿ ವಿತಾ ಬರೆದು ರಿಜಿಸ್ಟ್ರಿ ಮಾಡಿರುತ್ತಾರೆ. ಈ ಹಕ್ಕಿನ ಪ್ರಕಾರ ನಾನು ಮುಂದರಿಸುತ್ತಿದ್ದೇನೆ. ಹೀಗಿರುವುದರಿಂದ ನನ್ನ ಗಂಡನ ಬಾಕಿದಾರರು ಅವರಿಂದ ಸಲ್ಲತಕ್ಕ ಬಾಕಿಯನ್ನು ನನಗಲ್ಲದೆ ಇತರರಿಗೂ ಸಲ್ಕೆ ಕೊಡಕೂಡದು. ಹಾಗೆ ಕೊಟ್ಟಲ್ಲು ನ್ಯಾಯವಾದ ಹಕ್ಕುದಾರಳಾದ ನನಗೇ ಬಾಧಿಸುವುದಿಲ್ಲ. ನ್ಯಾಯವಾದ ಹಕ್ಕುದಾರಳಾದ ನನಗೇನೇ ಸಲ್ಕೆ ಕೊಟ್ಟು ರಸೀತಿ ಪಡೆಯತಕ್ಕದ್ದು ಎಂಬದಾಗಿ ಸೂಚಿಸೋಣಾಗಿರುತ್ತೆ.

ಕಿರುಗೂರು, 16-11-38. } 3 ಪದಾರ್ಥಿ ಜೇವಮ್ಮ.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಆದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದೆವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಕ್ಕೆ ಸಂಗತಿಗಳಿಂದ ಲಭಿಸಿದ ಸೃಷ್ಟಿಯನ್ನು ಮೆಂಬರುಗಳೊಡನೆ ಆನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿಯಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇವಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇವಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ಪರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪೆನಿಯ ಜೀವ ವಿಮೂ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅವರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮೂ ಕಂತು.	ಜೀವ ವಿಮೂ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಆಕ್ಟಿನ ಮೇರೆ ಶೇವಣಾತಿ:—ಈ ಖಾನೂನು ಮೇರೆ ಶೇವಣಾತಿ ಮಾಡತಕ್ಕದಿದ್ದ ರೂ. 2 ಲಕ್ಷವನ್ನು ಪೂರ್ತಿಯಾಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,

(52-26) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಧಾ ತು ಪು ಷ್ಟಿ ಲೇ ಹ .

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನತೆಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮ ಲೇ ರಿ ಯಾ , ನಿ ವಾ ರಿ ಣೆ .

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಾಟ್ಲಿ ರೂ. 0—13—0.

ಸ್ಪಿ ೀ ನ್ ಮಿ ಕ್ಷ್ಚ ರ್ .

ಜ್ವರಗೆಡ್ಡಿ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ತೆರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾ ಲ ಗ್ರ ಹ ಗು ಟಿ ಕೆ .

ಮಕ್ಕಳಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಲಿ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಪಣಿಕೇರಿ. (3) ಬಿ. ಪುಟ್ಟಯ್ಯ ಜೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (5) ಸುಂದರ ಪ್ರಭು, ಸುಳ್ಯ. (6) ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು. [17]

ಕೊ ಡ ಗು ಪ ತ್ರಿ ಕೆ ಗೆ ಗೆ

ಚಂದಾದಾರರಾಗಿರಿ.

ಡಾ. ಕೆ. ಕೆ ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ಚಿಕಿತ್ಸೆ ಮಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧಿ.

ಚೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಪಡಿಸುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ನಲ್ಕೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ಕೊಡಗಿನ ಭವಿಷ್ಯತ್ತೂ ಮತ್ತು ಕಾರ್ಯ ಸಾಧಿಸುವವರೂ.

ಲೇಖಕ:—ಕ. ಪಿ. ಮುದ್ದಪ್ಪ, ಬಿ. ಎ.,

ತಾ. 14-10-38ರ 'ಕೊಡಗು' ಪತ್ರಿಕೆಯ ಮುಂಬರವಣಿಗೆಯಲ್ಲಿ (Leading Article) 'ಕೊಡಗಿನ ಜನರ, ಮುಖ್ಯವಾಗಿ ರೈತರ ಮುಂದಿನ ಹಿತದ ದೃಷ್ಟಿಯಿಂದ ಕೊಡಗಿನ ಭವಿಷ್ಯತ್ತನ್ನು ಯಾವ ರೀತಿ ರೂಪಿತಗೊಳಿಸಬೇಕೆಂಬುವುದರ ಸಲುವಾಗಿ ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ, ನಿರ್ದಾಕ್ಷಿಣ್ಯದಿಂದ ವ್ಯಕ್ತಿದೂಷಣೆಗಳನ್ನು ಬಿಟ್ಟು ಪ್ರಚುರಪಡಿಸುವಿರಾಗಿ' ಪ್ರೇರೇಪಿಸಿಕೊಂಡಂತೆ ನನ್ನ ಕೆಲವು ಮಾತುಗಳನ್ನು ಕೊಡಗಿನ ಜನರ ಮುಂದಿಡಬೇಕಾಗಿ ಬಯಸುತ್ತೇನೆ.

ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಟ್ಟುಕೊಂಡು ಕೊಡಗಿಗೆ ಸ್ಥಳೀಯ ಸರ್ಕಾರವು (Autonomous Government) ಸಿಗುವಂತೆ ಚಳವಳಿ ಹೂಡಬೇಕೋ ಅಥವಾ ಕೊಡಗನ್ನು ಮದ್ರಾಸು ಆಧಿಪತ್ಯಕ್ಕೆ ಅಥವಾ ಮುಂದೆ ನಿರ್ಮಿಸಲಿಕ್ಕಿರುವ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಬೇಕೋ ಎಂಬ ಪ್ರಶ್ನೆಯು ಈಗ ಕೊಡಗಿನ ಜನರನ್ನು ತಳಮಳಿಸುತ್ತಿದೆ. ಕೆಲವು ಸಂಸ್ಥೆಗಳೂ ಮತ್ತು ಜನತೆಯ ಸಭೆಗಳೂ ಈ ವಿಷಯವನ್ನು ಚರ್ಚಿಸಿ ಜನರ ಅಭಿಪ್ರಾಯಗಳನ್ನು ತಕ್ಕ ಮಟ್ಟಿಗೆ ಪ್ರಚುರಗೊಳಿಸಿದ್ದಾರೆ. ಇವರಲ್ಲಿ ಕೊಡಗಿನ ಕಾಂಗ್ರೆಸ್ ಸಂಸ್ಥೆಯೊಂದು. ಈ ಸಂಸ್ಥೆಯು ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಒಂದು ಭಾಗವಾಗಿ ಜನತೆಯ ಒಳಿತಕ್ಕಾಗಿ ಕೆಲಸ ಮಾಡುತ್ತದೆಂದು ಹೇಳುವರು. ಆದರೆ ಕೊಡಗಿನ ಕಾಂಗ್ರೆಸ್ ಮುಂಬರುಗಳ ತೀರ್ಪು ಠರಾವುಗಳನ್ನು ಅಜಮಾಯಿಸಿ ನೋಡಿದರೆ ಅವರು ಜನತೆಯ ಪರವಾಗಿ ಕೆಲಸ ಮಾಡಿದೆ ದೊಡ್ಡ ದೊಡ್ಡ ಜಮೀನ್ದಾರರಿಗಾಗಿಯೋ, ಅಥವಾ ಕಾಫಿ ಪ್ಲಾಂಟರುಗಳಿಗಾಗಿಯೋ, ಅಥವಾ ಕೊಡಗಿನಲ್ಲಿವಾಸಿಸುವ ಯೂರೋಪಿಯನ್ ಜನರಿಗಾಗಿಯೋ ಹೋರಾಡಲು ಸೊಂಟಗಟ್ಟಿರುವಂತೆ ಯಾರಿಗೂ ಗೋಚರವಾಗದಿರದು. ಕೊಡಗನ್ನು ಮದ್ರಾಸಿಗೆ ಸೇರಿಸಬೇಕೋ ಅಥವಾ ಪ್ರತ್ಯೇಕವಾಗಿಡಬೇಕೋ ಎಂಬ ಬ್ರಿಟಿಷ್ ಸರ್ಕಾರವು 1919ರಲ್ಲಿ 'ಮಾಂಟ್-ಫರ್ಡ್' ಮುಸೂದೆಯು ಜಾರಿಗೆ ಬರುವಾಗ್ಗೆ ಕೊಡಗಿನಪರನ್ನು ಕೇಳಿಕೊಂಡಲ್ಲಿ ಕೊಡಗಿನಿಂದ ತುಂಬಾ ಪ್ರಯೋಜನ ಹೊಂದುವವರ (Those who hold vested interest) ಮತ್ತು ಕೊಡಗಿನ ಅಧಿಕಾರಿ ವರ್ಗದವರು ತೀರ್ಮಾನಿಸಿದಂತೆ ಕೊಡಗನ್ನು ಬೇರೆಯಾಗಿ ಇಟ್ಟದ್ದರಿಂದ ಇನ್ನೂ ಕೊಡಗಿಗೆ ದ್ವಿಭಾಗ (Diarchy) ಸರ್ಕಾರವೂ ಸಹ ಸಿಕ್ಕದೆ ಸುತ್ತ ಮುತ್ತಲಿನ ಬ್ರಿಟಿಷ್ ಪ್ರಾಂತಗಳಿಗಿಂತ ಮೂವತ್ತು ವರ್ಷಕ್ಕೆ ಹಿಂದುಳಿದದಲ್ಲದೆ ಕೊಡಗು ಹಿಂದುಳಿದ ಇಂಡಿಯಾ ದೇಶದ ಭಾಗಗಳಲ್ಲಿ ಒಂದಾಗಿ ಕರೆಯಲ್ಪಡುತ್ತದೆ. ಮತ್ತು ಜನರಿಗಾಗಿ ಜನರ ಮತದಂತೆ ನಡೆಸಲ್ಪಡುವ ಸರ್ಕಾರಕ್ಕೆ ಬದಲು ದಬ್ಬಾಳಿಕೆಯ ರಾಜ್ಯವೇ ಉಳಿದಿದೆ. ಇದಕ್ಕೀಗ ಜನರೇ ವ್ಯಸನಪಡಬೇಕಲ್ಲದೆ ಯೂರೋಪಿಯನ್ನರೂ, ಉದ್ಯೋಗಸ್ಥರೂ, ದೊಡ್ಡ ದೊಡ್ಡ ಜಮೀನ್ದಾರರೂ ಬೇಸರಿಸುವುದಿಲ್ಲ. ಈಗಲಾದರೂ ಹಾಗೆ ಮಾಡದೆ ಜನರೇ ಮುಂದೆ ಬಂದು ತಮ್ಮ ಅನಿಸಿಕೆಯ ಅಭಿಪ್ರಾಯವನ್ನು ಒಮ್ಮತದಿಂದ ಮದ್ರಾಸಿಗೆ ತಿಳಿಸಬೇಕೆಂದು ಸೂಚಿಸಿ ಚಳವಳಿ ಹೂಡಬೇಕು. ಮೈಸೂರಿಗೆ ಸೇರಿಸುವಂತೆ ತೀರ್ಮಾನಿಸಿದರೂ ತಪ್ಪಾಗದು. ಕೊಡಗಿನ ಭೂಗೋಳ ರಚನೆಯನ್ನು ಪರೀಕ್ಷಿಸಿದಲ್ಲಿ ಮೈಸೂರೇ ಕೊಡಗನ್ನು ಒಳಗೊಳ್ಳಬೇಕೆಂದು ಹೊಳೆಯುವುದು. ದೇಶಿಯ ಸಂಸ್ಥಾನಗಳೂ ಮತ್ತು ಬ್ರಿಟಿಷ್ ಇಂಡಿಯಾ ಆಧಿಪತ್ಯಗಳೂ 1935ನೇಯ ಇಸವಿಯ ಹೊಸ ಇಂಡಿಯಾ ಕಾಯಿದೆಯಂತೆ ಫೆಡರಲ್ ಗವರ್ನ್‌ಮೆಂಟಿನಿಂದ ಆಳಲ್ಪಟ್ಟಲ್ಲಿ ಕೊಡಗನ್ನೊಳಗೊಂಡ ಮೈಸೂರು ಸಂಸ್ಥಾನಕ್ಕೂ ಸಹ ಜನಹಿತಕರವಾದ ಜುನಾಯಿತ (Representative Government) ಸರ್ಕಾರವು ಸಿಕ್ಕುವುದರಲ್ಲಿ ಸಂದೇಹವಿಲ್ಲ. ಕರ್ನಾಟಕ ಪ್ರಾಂತವು ಈಗ ಸದ್ಯಕ್ಕೆ ನಿರ್ಮಿತವಾಗುವ ಸಂಪರ್ಭವು ತೋಚುವುದಿಲ್ಲ. ಹಾಗೆಯೇ ಈಗ ಕೊಡಗನ್ನು ಮದ್ರಾಸಿಗೆ ಸೇರಿಸಿದರೆ ಕರ್ನಾಟಕ ಪ್ರಾಂತ ರಚನೆಯಾದಾಗ ನಾವು ಸಹ ಅವರೊಳಗೆ ಬರುವೆವು. ಮತ್ತು ಒಂದೇ ಹೊಡೆತದಿಂದ ನಾವು ಬಯಸುವಂತೆ ನನ್ನುಗೆ ಸ್ಥಳೀಯ ಸರ್ಕಾರವೂ ಸಹ ಈಗಲೇ ಸಿಗುವುದು. ನಮ್ಮ ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗಳೂ ಊರ್ಜಿತಗೊಳ್ಳುತ್ತವೆ. ಹೀಗೆ ಮಾಡುವೆ ಇಷ್ಟು ಚಿಕ್ಕದಾದ ಕೊಡಗನ್ನು ಬೇರೆ ಒಂದು ಸ್ಥಳೀಯ ರಾಷ್ಟ್ರವಾಗಿ (Autonomous State) ನಿರ್ಮಿಸುವುದರಿಂದ ನಮ್ಮ ರಾಜ್ಯಾಂಗದ ವ್ಯಯವು ಅಧಿಕವಾಗಿ ಅನಾಧಿಯಿಲ್ಲದೆ ತೊಂದರೆಗಳಿಗೆ ಈಡಾಗುವೆದೆಂಬುದಕ್ಕೆ ಕೆಲವು ಕಾರಣಗಳನ್ನು ಈ ಕೆಳಗೆ ಕೊಡಲುದ್ಯುಕ್ತನಾಗುವೆನು.

ರಾಜಕೀಯ ದೃಷ್ಟಿಯಿಂದ ಹೋದರೆ ಕೊಡಗನ್ನು ಬೇರೆ ಇಟ್ಟುಕೊಳ್ಳುವುದರಿಂದ ಬ್ರಿಟಿಷ್ ಇಂಡಿಯಾದ ಇತರ ಸುತ್ತುಮುತ್ತಲಿನ ಪ್ರಾಂತಗಳಿಂದ ನಾವು ಬೇರೆಯಾಗುವೆವು. ನಮ್ಮದೇ ಭಾಷೆಯನ್ನಾಡುವ ಇತರ ಕನ್ನಡಿಗರಿಂದ ನಿರ್ಭಾಗವಾಗಿ ನಮ್ಮ ಮಾತೃ ಭಾಷೆಯಾದ ಕನ್ನಡಕ್ಕೂ ಸಹ ತುಂಬಾ ಹಾನಿಯಾಗುವುದು. ಮತ್ತು ಈಗ ಕಂಡು ಬರುವಂತೆ ದೇಶೀಯ ಚಳವಳಿಯಲ್ಲಿ (National conciousness) ಊರ್ಧ್ವ ರೀತಿಯನ್ನು ಹೊಂದದೆ ನಿಂತಲ್ಲೇ ಕೊಳೆತು ನಾರಬೇಕಾಗುವುದು. ನಮ್ಮ ನಾಗರೀಕತೆಯೂ ಸಹ ನುಂದುವರಿಯಲು ತೊಡಕಾಗಿ ಕೂಪ ಮಂಡೂಕದಂತೆ ಎಷ್ಟು ಕೊಚ್ಚಿಕೊಂಡರೂ ಕಾಡು ಸೀಮೆಯ ಹಿಂದುಳಿದ ಪಂಗಡದವರೆಂದೇ ಕರೆಯಲ್ಪಡಬೇಕಾಗುವುದು. ಬ್ರಿಟಿಷ್ ಪಾರ್ಲಿಮೆಂಟಿನ ಚರ್ಚೆಯಲ್ಲಿ ಹೇಳಿದಂತೆ ಹಿಂದುಳಿದ ಪಂಗಡಗಳನ್ನು ರಾಜಕೀಯ ವಿಷಯಗಳಲ್ಲಿ ಮುಂದೆ ಸರಿದವರ ಜೊತೆಗೆ ಸೇರಿಸುವುದರಿಂದ ಹಿಂದುಳಿದ ಜನರಿಗೆ ಜನರ ಜೊತೆಯಲ್ಲಿ ಸರಿಯಲು ಕಷ್ಟವಾದೀತು. ಇದೇ ವಿಷಯವನ್ನು ವಿಮರ್ಷಿಸಿದಲ್ಲಿ ಬ್ರಿಟಿಷ್ ಇಂಡಿಯಾದ ಜನರು ಇನ್ನೂ ಕೆಲವು ವರ್ಷಗಳ ನಂತರ ಮುಂದೆ ಸರಿದ ಮೇಲೆ ಅವರ ಜೊತೆ ಹಿಡಿಯುವುದು ತುಂಬಾ ಕಷ್ಟ ಸಾಧ್ಯವಾದದ್ದೇ ಸರಿ. ಇದೇ ರೀತಿಯಿಂದ ದಬ್ಬಾಳಿಕೆಗೆ ಒಳಗಾಗಿ ನಡೆಯಲು ಪ್ರಜೆಗಳು ಇಚ್ಛಿಸುವರೋ ಎಂಬದನ್ನು ಈಗ ಆನರೇ ನಿರ್ಣಯಿಸಬೇಕು. ಹಿಂದುಳಿದ ದ್ವೇಷವೆಂಬ ನೆಪದಿಂದ ತುಂಡು ತುಂಡಾಗಿ ಖಂಡಿಸಿ (Divide and Rule) ನಮ್ಮನ್ನು ಸುಲಿಗೆ ಮಾಡುವುದೇ ಬ್ರಿಟಿಷರ ಧರ್ಮವೂ, ಕರ್ಮವೂ ಮತ್ತು ಏಳಿಗೆಯೂ ಆಗಿದೆ. ನನ್ನುಂತೆ ಸಂಕಟಪಡುವ ಇನ್ನೂ 15 ಮಿಲಿಯ ಜನರನ್ನು ಸಹ ಈ ರೀತಿಯಿಂದ ವಿಂಗಡಿಸಿ ಅಲ್ಲಿ ಬೆಳೆಯುವ ಕಾಫಿ, ಸಿಂಕೋನ, ಟೀ, ಮೊದಲಾದ ಬೆಳವಣಿಗೆಯಿಂದ ಲಾಭ ಹೊಂದಿ ನಮ್ಮನ್ನಾಳುವರು. ಈ 15 ಮಿಲಿಯ ಜನರನ್ನು ಬೇರೆ ಮಾಡಿರುವುದರಿಂದ ಬ್ರಿಟಿಷ್ ಇಂಡಿಯಾ ದೇಶದ ಬಾಳ್ವಿಕೆಗೆ ಅಗಾಧವಾದ ತೊಡಕಾಗುವುದರಿಂದಲೇ ಇಂಡಿಯನ್ ನೇಶನಲ್ ಕಾಂಗ್ರೆಸ್ ಫೈಜಪುರ್ ಮತ್ತು ಹರಿಪುರದಲ್ಲಿ ನಡೆದ ಕಾಂಗ್ರೆಸ್ ಉಚ್ಚ ಸಮ್ಮೇಳನದಲ್ಲಿ ಎಲ್ಲಾ ಚೀಫ್ ಕಮಿಷನರುಗಳಿಂದ ಆಳಲ್ಪಡುವ ಸಂಸ್ಥಾನಗಳನ್ನೂ ಮತ್ತು ಬೇರೆಯಾಗಿರಿಸಲ್ಪಟ್ಟ ಪ್ರದೇಶಗಳನ್ನೂ ಬ್ರಿಟಿಷ್ ಇಂಡಿಯಾ ಆಧಿಪತ್ಯಗಳಿಗೆ ಸೇರಿಸಬೇಕಾಗಿ ತೀರ್ಮಾನಿಸಿರುವರು. ಹಾಗೆಯೇ ಕೊಡಗನ್ನು ಮದ್ರಾಸಿಗೂ, ಅಜ್ಮೀರ್ ಮಿರ್ವಾರನ್ನು ಸಂಯುಕ್ತ ಪ್ರಾಂತಕ್ಕೂ, ಡಿಲ್ಲಿಯನ್ನು ಪಂಜಾಬಿಗೂ, ಬಲುಚಿಸ್ತಾನವನ್ನು ಸಿಂಧು ಪ್ರಾಂತ್ಯಗಳಿಗಳೂ ಸೇರಿಸಬೇಕೆಂದೂ ಜನರಿಗೆ ಅಪ್ಪಣೆ ಇಟ್ಟು ಎಲ್ಲಾ ಕಡೆಯೂ ಚಳವಳ ಎಬ್ಬಿಸುವುದರಲ್ಲಿದ್ದಾರೆ. ಇಂಥಾ ತೀರ್ಮಾನದಿಂದ ಕಾಂಗ್ರೆಸ್ ಮುಂಬಾಳುಗಳು ಹಿಂದೆ ಸರಿಯರೆಂದು ಯಾರೂ ತಾನೇ ಹೇಳಬಲ್ಲರು. ಅಂದ ಮೇಲೆ ಕೊಡಗಿನಿಂದ ಡೆಪ್ಯುಟೇಶನ್‌ಹೋದವರು ಕಾಂಗ್ರೆಸ್ ಕಾರ್ಯಕಾರಿ ಮಂಡಲದ ನಿರ್ಣಯಗಳನ್ನು ಒಟ್ಟಾಗಿ ಕಾಣದೆ ಒಬ್ಬೊಬ್ಬರ ಅಭಿಪ್ರಾಯವನ್ನು ತೆಗೆದುಕೊಂಡಾಗಿನ ಮುದ್ರಿಸಿದ ವರ್ತಮಾನವು ಎಷ್ಟರ ಮಟ್ಟಿಗೆ ನಿಜವೆಂಬುದನ್ನು ನೀವೇ ತಿಳಿಸುಕೊಳ್ಳಬೇಕು. ವರ್ಕಿಂಗ್ ಕಮಿಟಿಯು ಅವರನ್ನು ನೋಡಲು ಅಪ್ಪಣೆ ಕೊಡದಿದ್ದದ್ದೇ ಕೊಡಗನ್ನು ಬೇರೆಯಾಗಿಡಲಿಕ್ಕೆ ಕಾಂಗ್ರೆಸ್ ವಿರೋಧವಿಂದು ತಿಳಿಯುವುದೆ. ಅದಂ ತಿರಲಿ.

1904 ನೇ ಇಸವಿಯಲ್ಲಿ ಲಾರ್ಡ್ ಕರ್ಜನ್ ಪ್ರಭುಗಳ ಆಳ್ವಿಕೆಯಲ್ಲಿ ಒಂದೇ ಭಾಷೆಯು ಮತ್ತು ಧರ್ಮಗಳೊನ್ನೊಳಗೊಂಡ ಪೂರ್ವ ಮತ್ತು ಪಶ್ಚಿಮ ಬಂಗಾಳವನ್ನು ಬೇರೆ ಮಾಡಿದಕ್ಕಾಗಿ ಆಗ ಎಳೇ ಪ್ರಾಯದಲ್ಲೇ ಇದ್ದ ಇಂಡಿಯನ್ ನೇಶನಲ್ ಕಾಂಗ್ರೆಸ್ ಎಷ್ಟು ವಿರೋಧ ಮಾಡಿರುವುದೆಂಬುವುದನ್ನು ಮತ್ತು ಬಂಗಾಳದ ಜನರಲ್ಲದೆ ದೇಶದ ಎಲ್ಲಾ ಕಡೆಯವರೂ ಎಷ್ಟು ಅಸಂತುಷ್ಟ ಭಾವನೆಯನ್ನು ತೋರಿಸಿದ್ದರೆಂಬುವುದನ್ನು ಎಲ್ಲರೂ ಬಲ್ಲವರಾದುದರಿಂದ ವಿಸ್ತರಿಸಿ ಬರೆಯುವುದಿಲ್ಲ. ನಿಜ ದೃಷ್ಟಿಯಿಂದ ನೋಡಿದರೆ ಅಂದಿನಂದಲೇ ಇಂಡಿಯನ್ ನೇಶನಲ್ ಕಾಂಗ್ರೆಸ್ ಹೆಚ್ಚು ಹೆಚ್ಚು ಶಕ್ತಿಯನ್ನು ಹೊಂದಿ 'ಸ್ವದೇಶಿ', 'ಹೋಮ್ ರೂಲ್', 'ಡೊಮೀನಿಯನ್ ಸ್ಟೇಟ್ಸ್' ಮೊದಲಾದದ್ದು ಬೇಕೆಂದು ಘೋರುಮೊಡಿ ಇಂದು ಅಷ್ಟು ಪ್ರಭಲಕ್ಕೆ ಬಂದಿರುವುದು. ಹೀಗೆ ಒಂದೇ ಭಾಷೆಯ ಜನರನ್ನು ವಿಂಗಡಿಸಿದ್ದಕ್ಕೆ ಚಳವಳ ಹೂಡಿರುವಲ್ಲಿ ನಾವಾದರೂ ಸಣ್ಣ ಸಣ್ಣ ಭಿನ್ನಭಾವಗಳನ್ನು ನುಜ್ಜು ನುರ್ಗಾಗಿ ಮಾಡಿ ದೇಶದ ಎಲ್ಲಾ ತರಹದ ಏಳಿಗೆಗೆ ಮೊಡ್ಡಿ ಬಂಡೆಯ ಕಲ್ಲಾಗಿ ನಿಂತಿರುವ ವಿಭಾಗಿಸಿ ಆಳುವ (divide and rule) ಕ್ರಮವನ್ನು ಧೂಳು ಪಾಲಾಗಿ ಮಾಡಿ ಕರ್ನಾಟಕ ಏಕೀಕರಣವನ್ನು ಮಾಡುವುದು ನಮ್ಮ ಕನ್ನಡಿಗರ ಕರ್ತವ್ಯವಲ್ಲವೋ? ಊಹಿಸಿರಿ ಮತ್ತು ಕರ್ತವ್ಯವನ್ನು ದಕ್ಷಿಸಿರಿ.

ಇನ್ನು ಕೆಲವರು ಆಂಧ್ರ, ಕರ್ನಾಟಕ, ಕೇರಳ ಮೊದಲಾದ ಸೀಮೆಗಳನ್ನು ಬೇರೆ ವಿಂಗಡ ಮಾಡಲು ಪ್ರಯತ್ನಿಸುವಾಗ ನಾವು ಮಾತ್ರ ಮದ್ರಾಸಿನ ಜೊತೆಗೆ ಸೇರಬೇಕೆಂದು ತಳಮಳಿಸುವುದು ಹುಚ್ಚುತನವೂ, ಅಸಹ್ಯವೂ ಆಗಿ ಕಾಣುತ್ತದೆಂದು ಹೇಳುವರು. ಇಂಥಾ ಚರ್ಚೆಯಲ್ಲಿ ಎಳ್ಳಷ್ಟೂ ತುಲಸೆಯಿಲ್ಲ. ಆಂಧ್ರ ಕರ್ನಾಟಕದಲ್ಲಿ ಕೊಡಗಿನಂಥ ಹತ್ತಾರು ಜಿಲ್ಲೆಗಳಿವೆ. ಅವುಗಳ ಆರ್ಥಿಕ ಸ್ಥಿತಿಯೂ ಸಹ ಬಹಳ ಉಚ್ಚ ಸ್ಥಿತಿಯಲ್ಲಿವೆ. ಅವರು ತಮ್ಮತಮ್ಮ ದೇಶದ ನಾಗರೀಕತೆ, ಬೆಳವಣಿಗೆ ಮತ್ತು ಜನರ ಹಿತವನ್ನೇ ಬಯಸಿ ಬೇರೆ ಪ್ರಾಂತ್ಯ ಮಾಡಲು ಪ್ರಯತ್ನಿಸುವರಲ್ಲದೆ ಮುಂದಾಳುಗಳಿಗೆ ಉಚ್ಚ ಸ್ಥಾನಗಳು ಸಿಗಬೇಕೆಂದು ಸ್ವಾರ್ಥದಿಂದಲ್ಲ. ಇಷ್ಟೆಲ್ಲಾ ಗುಣಗಳು ಕರ್ನಾಟಕ ಆಂಧ್ರ ದೇಶಗಳನ್ನು ಬೇರೆ ಮಾಡಬೇಕೆಂದು ಎದ್ದು ಹೇಳುತ್ತಿದ್ದರೂ, ಅನೇಕ ಜನರು ಹೀಗೆ ಮಾಡಿದಲ್ಲಿ ಪ್ರಾಂತೀಯತ್ವ (provincialism) ವು ಬಂದು, ಒಂದು ಪ್ರಾಂತದವರಲ್ಲಿ ಇನ್ನೊಂದು ಪ್ರಾಂತವರ ಸ್ನೇಹಾಚಾರಗಳು ಕೊಡವೆಯಾಗುವವೆಂದು ಹಾಗೆಯೇ ಒಟ್ಟಾಗಿ ಇಡಲಿಚ್ಛಿಸುವರು. ಆದರೆ ಭಾಷಾವಾರು ಅಥವಾ ಇನ್ನಾವದಾದರೂ ನಿಯಮದಿಂದಲೋ ಸಾಧಾರಣ ಸಣ್ಣದಾದ ಪ್ರಾಂತಗಳನ್ನು ಮಾಡದಿದ್ದಲ್ಲಿ ದೇಶದ ಆಳ್ವಿಕೆಯು ಮತ್ತು ಏಳಿಗೆಯು ಕೆಳತರಗತಿಗಿಳಿದು ಜನರ ಏಳಿಗೆಗೆ ಕುಂದುಕವಾಗುವುದು. ಹೀಗೆಂದ ಮೇಲೆ ನಮ್ಮ ಹೆಚ್ಚಿನ ಫಲಭರಿತವಲ್ಲದ, ಬೆಟ್ಟ ಪ್ರದೇಶದ ಮತ್ತು ಕೈಗಾರಿಕೆ ಇಲ್ಲದ ಕೊಡಗು ಪ್ರದೇಶವನ್ನು ಬೇರೆಯಾಗಿಟ್ಟು ಜನರಿಗೆ ಯಾವ ತರಹದಲ್ಲಿ ಹಿತಕರವಾದ ಸರ್ಕಾರವನ್ನು ನಡೆಯಿಸಲಿಕ್ಕಿರುವರೋ ಎಂಬುದು ನಮ್ಮ ಊಹನೆಯನ್ನು ಪೂರಾ ಮೀರಿಸುವಂತಿದೆ. ಪ್ರಾಂತ್ಯತ್ವವನ್ನೇ (provincialism) ಹಾವು ಹಾಲನ್ನು ಬಯಸುವಂತೆ ಬಯಸುವರು. ಹೀಗೆ ಇಚ್ಛಿಸುವವರಿಗೆ ಜನಹಿತಕರವಾದ ಸರ್ಕಾರವನ್ನು ನಡೆಸಿದ ಅನುಭವ ಇರುವುದೋ? ಅಥವಾ ನಡೆಸುವ ಕ್ರಮವನ್ನು ಉಚ್ಚ ತರಗತಿಯಿಂದ ಯೋಚನೆ ಮಾಡಿರುವರೋ ಎಂದು ಕೇಳಲೂ ಧೈರ್ಯ ಬರುವುದು.

ದೇವದತ್ತ.

ಸಾಮಾಜಿಕ ಕಾದಂಬರಿ.

೧೪ನೇ ಅಧ್ಯಾಯ.

ಹಗಲೆಲ್ಲಾ, ಲೋಕಯಾತ್ರೆಯನ್ನು ಮಾಡಿ ಬಳಲಿ ಬೇಸತ್ತು, ಕಾಂತಿವಿಹೀನನಾಗಿ ಈಗ ದಿನಮಣಿಯು ಪಶ್ಚಿಮಾಂಬುಧಿಯ ಒಳಗಿಳಿಯುವವನಂತೆ, ದಿಗಂತದಲ್ಲಿ ಮೆಲ್ಲಮೆಲ್ಲಗೆ ಕೆಳಗುರುಳುತ್ತಿದ್ದನು. ಸಮುದ್ರದ ಆನಂತವಾದ ಭೋರ್ಗರೆಯು, ಕ್ರಮಕ್ರಮವಾಗಿ ಶಾಂತವಾಗುತ್ತಾ ಬರುತ್ತಿತ್ತು. ಸಮುದ್ರ ದಡದ ಮೇಲ್ಭಾಗದ ನಗರದ ನಾಗರೀಕರ ವಿಹಾರಾರ್ಥವಾಗಿ ಒಂದು ಮನೋಹರವಾದ ನಂದನವನವು ನಿರ್ಮಾಣಮಾಡಲ್ಪಟ್ಟಿತ್ತು.

ವಸಂತಕಾಲ. ಅಲ್ಲಲ್ಲಿ ವಿಸ್ತಾರವಾಗಿ ಬೆಳೆದಿದ್ದ ರಸಾವೃಕ್ಷಗಳೂ, ಹುಣಿಸೆಮರಗಳೂ ನಿಬಿಡವಾದ ಹಸುರೆಲೆಗಳಿಂದ ಕೂಡಿ ತಮ್ಮ ಬುಡಕ್ಕೆ ಬಂದವರಿಗೆ ಆನಂದ ಪ್ರದಾಯಕವಾದ ತಣ್ಪನ್ನು ಕೊಡುತ್ತಾ ಕ್ಲೇಶೀವನಕ್ಕೆ ದಯಮಾಡಿಸುನವರಿಗೆಲ್ಲಾ ಸ್ವಾಗತವನ್ನು ಬಯಸುವಂತೆ ನಿಂತಿದ್ದವು. ಈ ಮರಗಳ ಬುಡದ ಸುತ್ತಲೂ ಚಕ್ರಾಕಾರದ ಆಸನಗಳು ವಿಹಾರಿಗಳ ವಿಹಾರಾರ್ಥವಾಗಿ ನಿರ್ಮಿಸಲ್ಪಟ್ಟಿದ್ದವು.

ವನದ ಕೆಲವೆಡೆಗಳಲ್ಲಿ ಚಕ್ರಾಕಾರದ ಕೊಳಗಳೂ, ಅದರ ಸುತ್ತಲೂ ನಾನಾ ಬಣ್ಣದ ಪುಷ್ಪಗಳಿಂದ ರಂಜಿಸುವ ಹೂಗಿಡಗಳೂ, ಕೊಳದ ಮಧ್ಯದಲ್ಲಿ ಮೂಗಿನಿಂದಲೂ, ಬಾಯಿಯಿಂದಲೂ ಅನವರತ ನೀರನ್ನು ಸೂಸುತ್ತಾ ನಿಂತಿದ್ದ ಲೋಹದ ಮನುಷ್ಯಮೂರ್ತಿಗಳೂ ವಿರಹಿಗಳ ಮನಸ್ಸಿಗೆ ಆನಂದವನ್ನು ಬೀರುವಂತಿದ್ದವು. ಅಲ್ಲಲ್ಲಿ ಅನೇಕ ಲತಾಮಂಟಪಗಳೂ, ತರತರದ ಹೂ ಎಲೆಗಳಿಂದ ಕೂಡಿದ ಗಿಡಮೂಲಿಕೆಗಳೂ, ವಸಂತಕಾಲದಲ್ಲಿ ಮತ್ತಷ್ಟು ಪುನೋರಂಜಕವಾಗಿ ರಂಜಿಸುತ್ತಾ ಆ ನಂದನವನದ ಆನಂದವನ್ನು ಇಮ್ಮಡಿಸಿ, ಪ್ರೇಕ್ಷಕರ ಮನಸ್ಸನ್ನು ವಿಕಾಸಗೊಳಿಸುತ್ತಿದ್ದವು.

ಮುಸ್ಸಂಜೆಯ ಹೊತ್ತಿನಲ್ಲಿ ಈ ವನದಲ್ಲಿ ಸೂರ್ಯಸ್ತಮನವನ್ನೀಕ್ಷಿಸುತ್ತಾ, ಸಮುದ್ರ ಗಾಳಿಯನ್ನೂ ಸ್ವಾದಿಸಲು ನೂರಾರು ಜನರು ನೆರೆದಿದ್ದರು.

ಒಂದೆಡೆ ಕೆಲವು ವಿದ್ಯಾರ್ಥಿಗಳು ಕುಳಿತು ಪರೀಕ್ಷೆಯ ವಿಷಯ ಮಾತಾಡುತ್ತಿದ್ದರು. ಒಂದೆಡೆ ವಕೀಲರು ಕುಳಿತು ರಾಜಕೀಯ ಚಳವಳಿಯ ವಿಷಯ ಪ್ರಸ್ತಾಪಿಸುತ್ತಿದ್ದರು. ಅಲ್ಲಲ್ಲಿ ಕೆಲವು ನಾಗರೀಕರು ತಮ್ಮ ಹೆಂಡತಿ ಮಕ್ಕಳೊಡನೆ ಕುಳಿತು, ಅಂತರ್ಗತನಾಗುವ ಸೂರ್ಯನನ್ನು ಮಕ್ಕಳಿಗೆ ತೋರಿಸುತ್ತಾ, ಅದರ ಸೌಂದರ್ಯವನ್ನು ಅವರಿಗೆ ವಿವರಿಸುತ್ತಿದ್ದರು. ಒಂದೆಡೆ ಕೆಲವರು ಜತೆಸೇರಿ ಸಂಗೀತಯಂತ್ರವನ್ನು ಹಾಡಿಸುತ್ತಿರು.

ಹೀಗೆ ಒಬ್ಬೊಬ್ಬರು ಒಂದೊಂದು ವಿನೋದದಲ್ಲಿ ಮಗ್ನರಾಗಿ ತಮ್ಮ ತಮ್ಮ ಕರ್ತವ್ಯವನ್ನೇ ಮರೆತಿರಲು ತನ್ನ ಕರ್ತವ್ಯವನ್ನು ಮಾಡಿ ಅವರನ್ನು ಎಚ್ಚರಗೊಳಿಸುವವನಂತೆ ರವಿ ಪಡುಗಡಲಿನಲ್ಲಿ ಮುಳುಗಿದನು, ಕತ್ತಲೆಯು ಎಲ್ಲೆಲ್ಲಿಯೂ ಹಬ್ಬತೊಡಗಿತು, ವಿಹಾರಾರ್ಥವಾಗಿ ಬಂದಿದ್ದವರೆಲ್ಲಾ ತಂತಮ್ಮ ಗೃಹಾಭಿಮುಖವಾಗಿ ನಡೆದರು

ಕ್ರಮಕ್ರಮವಾಗಿ ಸ್ಥಳವು ನಿರ್ಜನವಾಯಿತು. ಸುರವಡಿಗಳಲ್ಲೂ ಬೆಟ್ಟಗಳ ತಪ್ಪಲಲ್ಲೂ ತಲೆದೋರುತ್ತಿದ್ದ ಕತ್ತಲೆಯು ಕ್ರಮಕ್ರಮವಾಗಿ ಲೋಕವನ್ನೆಲ್ಲಾ ಆವರಿಸಿತು. ಸಮುದ್ರವು ಕಪ್ಪು ಬಣ್ಣವನ್ನು ಹೊಂದಿತು. ಅಲ್ಲಲ್ಲಿ ನೀರಿನ ಮೇಲೆ ನಿದ್ರೆ ಮಾಡುತ್ತಿದ್ದ ದೋಣಿಗಳಲ್ಲಿ ಬೆಂಕಿಯು ಮಿಣಗುಟ್ಟತೊಡಗಿತು. ಆಕಾಶದಲ್ಲಿ ತಾರೆಗಳು ಉದಯಿಸಿದವು.- ಹಿಂಭಾಗದ ವನದಲ್ಲಿ ಸಾವಿರಾರು ವಿದ್ಯುಚ್ಛಕ್ತಿಯು ದೀಪಗಳು ಜಾಜ್ವಲ್ಯಮಾನವಾಗಿ ಕಂಗೊಳಿಸುತ್ತಿದ್ದುವು. ಸುಮಾರು ಎಂಟು ಗಂಟೆಯ ಸಮಯದಲ್ಲಿ, ಯುವಕನೊಬ್ಬನು, ಪಟ್ಟಣದ ಕಡೆಯಿಂದ ಬಂದು, ಸಮುದ್ರದಡದಲ್ಲಿ ಬಂದು ಮರದ ನೆರಳಿನಲ್ಲಿದ್ದ ಆಸನದ ಮೇಲೆ ಕುಳಿತು ಸಮುದ್ರವನ್ನೇ ನೋಡುತ್ತಾ ಕುಳಿತನು. ಆಜುಬಾಜಿನಲ್ಲಿ ಯಾರೂ ಇರಲಿಲ್ಲ.

ಒಳ್ಳೆ ಶಾರೀರ ದಾರ್ಢ್ಯದಿಂದ ಕೂಡಿದ್ದ ಈ ಯುವಕನು ನೋಡಲು ಸುಲಕ್ಷಣನಾಗಿದ್ದನು. ಕಾಲಸ್ಥಿತಿಗೆ ಸರಿಯಾದ ಉಡುಪನ್ನು ಧರಿಸಿದ್ದನು. ಮುಖದಲ್ಲಿ ವಿದ್ಯಾದೇವತೆಯ ಕಳೆಯು ಮೆರೆಯುತ್ತಿತ್ತು. ಮರುಕ್ಷಣದಲ್ಲಿ, ಪಸನಾದ ಮೋಟಾರು ಬಂಡಿಯೊಂದು ಬಂದು ಹತ್ತಿರದ ಮತ್ತೊಂದು ಆಸನದ ಬಳಿ ನಿಂತಿತು. ಗಾಡಿಯನ್ನು ನಡೆಸುತ್ತಿದ್ದವನು ಒಬ್ಬ ಯುವಕ. ಬಹು ಅಮೂಲ್ಯವಾದ ವಸ್ತ್ರಗಳನ್ನು ಧರಿಸಿದ್ದನು. ಬಂಡಿಯು ನಿಂತೊಡನೆ, ಅವನು ಹಿಂದಿರುಗಿ, ಹಿಂಭಾಗದ ಆಸನದಲ್ಲಿ ಕುಳಿತು ನಿದ್ರಿಸುತ್ತಿದ್ದ ಯುವತಿಯ ಮುಖವನ್ನು ನೋಡಿದನು. ಅವಳು ಕಣ್ಣೆರೆಯಲೇ ಇಲ್ಲ. ಯುವಕನು ಆತ್ತತ್ತ ನೋಡಿದನು, ಯಾರನ್ನು ಕಾಣಲಿಲ್ಲ. ನಮ್ಮ ಪೂರ್ವೋತ್ತ ವ್ಯಕ್ತಿಯ ಆಸನವು ಒಂದು ಮರದ ನೆರಳಿನಲ್ಲಿದ್ದುದರಿಂದ, ಆಗಂತುಕನಿಗೇ ಅವನನ್ನು ಕಾಣಲಿಲ್ಲ. ಅವನು ಸ್ವಲ್ಪ ಹೊತ್ತು ಯುವತಿಯನ್ನೇ ನಿಟ್ಟಿಸುತ್ತಿದ್ದು, ಬಂಡಿಯಿಂದಿಳಿದು ಮೆಲ್ಲಗೆ ಯುವತಿಯ ಕರಸ್ಪರ್ಶ ಮಾಡಿದನು. ಯುವತಿಯು ಹಟತ್ತಾಗಿ ಕಣ್ಣೆರೆದಳು.

ಯುವಕನು ಮುಗುಳು ನಗೆಯೆಸೆದು ಸ್ವಾಸುತ್ತಾ 'ಏನು ಬಲವಾದ ನಿದ್ರೆಯೇ?' ಎಂದನು ಅವನ ಶರೀರವು ಕಂಪಿಸುತ್ತಿತ್ತು.

ಯುವತಿಯು ಮಾತಾಡಲೇ ಇಲ್ಲ. ಬೆಪ್ಪಾಗಿ ಯುವಕನನ್ನೂ, ಬಂಡಿಯನ್ನೂ ಸುತ್ತುಮುತ್ತಲಿನ ವನವನ್ನೂ ಒಮ್ಮೆಲೇ ಆತುರದಿಂದ ನೋಡಿದಳು. ಅವಳ ಕೈಕಾಲುಗಳು ನಡುಗಲಾರಂಭಿಸಿದವು. ನಡಗುತ್ತಾ ಅವಳು ತನ್ನ ಕಣ್ಣನ್ನು ಕರತಳದಿಂದ ವರಸಿ, ಬಿಕ್ಕುತ್ತಾ 'ನಾವೆಲ್ಲಿರುವೆವು? ನನಗೇನಾಯಿತು! ನಿನ್ಯಾರು?' ಎಂದು ಕೇಳಿ ದುಃಖಿಸಲಾರಂಭಿಸಿದನು.

ಮನುಷ್ಯ–'ಕಮಲಾ' ಏತಕ್ಕೆ ಹೆದರುವೆ? ಸಮಾಧಾನಳಾಗು. ನನ್ನನ್ನು ಗೊತ್ತಾಗುವುದಿಲ್ಲವೇ? ವಸಂ'.....

ಯುವತಿಯು ಓಕ್ಕತ್ತಡವೆಯೇ ಸಿಡಿಲು ಬಡಿದಂತೆ ಹಿಂದೆಗೆದಳು. ಸ್ವಲ್ಪ ಹೊತ್ತು ಏನನ್ನು ಹೇಳಲಿಕ್ಕಾಗಲಿಲ್ಲ, ಯುವಕನ ಮುಖವು ಕಳಾಹೀನವಾಯಿತು. ಕೊಡಲೆ ನಾಟ್ಯಾನಂದವನ್ನು ಹೊಂದಿತು. 'ಕಮಲಾ! ಹುಚ್ಚಳ ಹಾಗೆ ಆಡಬೇಡ, ಇಷ್ಟೆಲ್ಲಾ ಮಾಡಿದ್ದು ನಿನ್ನ ಸುಖಕ್ಕಾಗಿಯೇ?' ಎನ್ನುತ್ತಾ ತನ್ನ ತಲೆಯನ್ನು ಕಾರಿನೊಳಗೆ ಚಾಚಿ, ಪಿಸುಮಾತಿನಿಂದ 'ಕಮಲಾ! ದಯವಿಟ್ಟು ಕ್ಷಮಿಸು. ನನ್ನ ಮನೋರಥವನ್ನು, ನಡೆಸಿಕೊಡುವೆಯೆಂದು ವಾಗ್ದಾನವಿತ್ತದ್ದಾದರೆ, ನಿನಗೆ ಯಾವುದೊಂದು ತೊಂದರೆಯನ್ನೂ ನಾನು ಮಾಡಲಾರೆ. ನಿಜವಾಗಿಯೂ ನಾನು ನಿನ್ನನ್ನಲ್ಲದೆ ಮತ್ತಾರನ್ನೂ ವರಿಸೆನು. ಚಂಡಿತನವನ್ನು ಬಿಟ್ಟು ಇನ್ನಾದರೂ ನನ್ನ ಮನಸ್ಸಿಗೆ ಆನಂದವನ್ನು ಕೊಡು' ಎಂದು ಹೇಳಿ ಯುವತಿಯ ಕಡೆಗೆ ಕೈನೀಡಿದನು.

ಯುವತಿಯು ಸ್ವಲ್ಪ ಹಿಂದೆ ಸರಿದು, ವಸಂತನ ಮುಖವನ್ನೆ ನೋಡಿದಳು, 'ವಸಂತ' ಎಂಬ ಶಬ್ದವು ಯುವಕನ ಬಾಯಿಂದ ಹೊರಟ ಕೂಡಲೆ ಅವಳಿಗೆ ಇದರಲ್ಲಿ ಏನೋ ಮೋಸವಿದೆಯೆಂದು ತಿಳಿಯಿತು. ವಿದ್ಯಾವಂತೆಯೂ ಸೂಕ್ಷ್ಮದೃಷ್ಟಿಯುಳ್ಳ ಬಾಲೆಯೂ ಆಗಿದ್ದುದರಿಂದ, ಕಮಲೆಯು ತನ್ನ ನಿಜಸ್ಥಿತಿಯನ್ನು ಒಡನೆ ಗ್ರಹಿಸಿ, ನಡೆದ ಮೋಸವನ್ನೆಲ್ಲಾ ಅರಿತುಕೊಂಡು, ಸಮಯವರಿತು, ವರ್ತಿಸಬೇಕೆಂದು ನಿರ್ಧರಿಸಿ, ಬಾಡಿದ ಮುಖದಿಂದ ವಸಂತನ ಮನಸ್ಸು ಕರಗುವಂತೆ 'ಅಣ್ಣಾ! ನೀನು ಮಾಡಿದ ಕೆಲಸವೇನು? ನಾನೆಲ್ಲಿರುವೆವು? ಕಾಮುಕತಿಯೆಲ್ಲಿ? ಬಂಡಿಯೂ ಎಲ್ಲಿ? ಮಾತಾಪಿತೃಗಳಿಲ್ಲದ ಅನಾಥೆಯಾದ ನನ್ನನ್ನು ನೀನೇ ಕಾಪಾಡಬೇಕು. ದಯವಿಟ್ಟು ನಡೆದ ರಹಸ್ಯವನ್ನೆಲ್ಲಾ ತಿಳಿಸು. ನನ್ನ ಪಟ್ಟಗೆ ಎಲ್ಲಿ?' ಎಂದು ಬಹು ಆತುರದಿಂದ ಕೇಳಿದಳು.

ವಸಂತ ಮದನನಿಗೆ ಸ್ವಲ್ಪ ಧೈರ್ಯವೂ, ಸಂತೋಷವೂ ಉಂಟಾಯಿತು. ಕಮಲೆಯು ತನ್ನ ನಿಜಸ್ಥಿತಿಯನ್ನು ತಿಳಿದೊಡನೆ ಏನು ಹೇಳುವಳೊ, ಹೇಗೆ ವರ್ತಿಸುವಳೊ ಏನಾದರು ಬಾಯಿಬಡಿದು ತನ್ನನ್ನು ತೊಂದರೆಗೀಡುಮಾಡುವಳೊ?' ಎಂಬೀ ಸಂಶಯದಿಂದ ಅನಮಧಾಸ ಚಿತ್ತನಾಗಿದ್ದ ವಸಂತನಿಗೆ ಕಮಲೆಯು ಇಷ್ಟೆಲ್ಲ ಸರಳವಾಗಿ ಮಾತಾಡಿದ್ದನ್ನು ಕೇಳಿ ಬಹು ಆನಂದವಾಯಿತು. ಹಸನ್ಮುಖನಾಗಿ 'ಕಮಲಾ! ನನ್ನನ್ನು ದಯವಿಟ್ಟು ಅಣ್ಣನೆಂದು ಸಂಬೋಧಿಸದಿರು. ನನ್ನ ಹೆಸರಿಡಿದು ಕರೆದರೂ ಕೋಪವಿಲ್ಲ. ಈಗ ನಡೆದ ಸಂಗತಿ ಇಷ್ಟೆ. ನಿನ್ನನ್ನು ಎಷ್ಟು ವಿಧವಾಗಿ ಬೇಡಿದರೂ ಸಹ ನೀನು ಒಪ್ಪಲಿಲ್ಲವಷ್ಟೆ? ಆದರೂ ನನ್ನ ಮನಸ್ಸಿನ ವ್ಯಾಮೋಹವು ತಿಲಮಾತ್ರವೂ ಕುಂದಲಿಲ್ಲ. ನಿನ್ನನ್ನು ಕಟ್ಟಿ ಸುಖಿಸಬೇಕೆಂಬ ಆಶೆಯು ನನ್ನ ಮನಸ್ಸನ್ನು ಸಂಪೂರ್ಣ ನಿನ್ನ ಗುಲಾಮನನ್ನಾಗಿ ಮಾಡಿರುವುದು. ಆವಕ್ಕೋಸ್ಕರ ನಾನಾರೀತಿಯಲ್ಲಿ ನಿನ್ನನ್ನು ಬೇಡಿದೆನು. ಇತರರಿಂದ ಹೇಳಿಸಿದೆನು. ನೀನು ಯಾವುದಕ್ಕೂ ಸಮ್ಮತಿಸಲಿಲ್ಲ. ಆದುದರಿಂದ ಕಡೆಯ ಈ ನೀಚ ದಾರಿಯನ್ನು ವಹಿಸಿದ್ದಾಗಿದೆ. ಕಾಮುಕತಿಯ ತಪ್ಪನ್ನು ಕ್ಷಮಿಸು.'

[ಸಶೇಷ.

ಅಭಿಪ್ರಾಯಗಳು ಒಂದೊಂದಾಗಿ ಸರಿದು ಬರುವುವು. ಆದರೆ ಸದ್ಯಕ್ಕೆ ಸ್ವಲ್ಪ ಬರೆದು ಕೊಡಗಿನ ಆರ್ಥಿಕ ಸ್ಥಿತಿ ಮತ್ತು ಜನರ ಆರೋಗ್ಯ ಸ್ಥಿತಿ ಮತ್ತು ಇನ್ನಿತರ ಪ್ರಬಂಧ ಭಾಷಣಗಳ ಠೀಕೆಯನ್ನೂ ಇನ್ನೊಂದು ಸಂಚಿಕೆಯಲ್ಲಿ ಬರೆಯುವೆನು. ಕೊಡಗಿನ ಆರ್ಥಿಕ ಸ್ಥಿತಿಯು ಬಹಳ ಹೀನ ಸ್ಥಿತಿಯಲ್ಲಿದೆ. ಇದರ ಉತ್ಪತ್ತಿಯು ಹಿಂದಿನ ವರ್ಷದ ಉಳುವರಿಯನ್ನೂ, ಮಧ್ಯಪರ್ತಿ ಸರ್ಕಾರದಿಂದ ಕೊಡುವ ಸಬ್ ಪೆನ್ಶನ್ ಮಂತಿಗೆಯನ್ನೂ ಕಳೆದಲ್ಲಿ ಸಾಧಾರಣ ಅಂದಾಜು ಹನ್ನೊಂದು ಲಕ್ಷಕ್ಕೆ ಮಿರದು. ಹೀಗಿರುವಲ್ಲಿ ಕಾಂಗ್ರೆಸ್ ನಿಬಂಧನೆಗೆ ಒಳಪಟ್ಟ ಕೊಡಗು ಕಾಂಗ್ರೆಸ್ ಮುಂದಾಳುಗಳು ನಿಷಾ ಸೇವನೆಯನ್ನು ನಿಲ್ಲಿಸಿದಲ್ಲ (prohibition) ಎಕ್ಸೈಸ್ (excise) ನಿಂದ ಬರುವ ಸುಮಾರು 3 ಲಕ್ಷ ರೂಪಾಯಿ ಉತ್ಪತಿಯನ್ನು ಕಳಕೊಳ್ಳುವುದಲ್ಲದೆ ಇದರ ಮೇಲುಸ್ತುವಾರಿ ನೋಡುವ ಅಧಿಕಾರಿಗಳ ಸಂಬಳ ಮೊದಲಾದ್ದುದನ್ನು ಕೊಟ್ಟು ಉಳಿದ ಬರೇ ಎಂಟು ಲಕ್ಷ ರೂಪಾಯಿಗಳಿಂದ ಜಿಲ್ಲೆಯ ಸರ್ಕಾರವನ್ನು ನಡೆಸುವದಲ್ಲದೆ ಇತರ ರಾಷ್ಟ್ರ ಕಟ್ಟೋಣ ಕೆಲಸಗಳನ್ನು ಸಪ ಕೈಕೊಳ್ಳಬೇಕು. ಇದನ್ನು ಹೇಗೆ ಕೈಕೊಳ್ಳುವದೆಂಬುದು ಎಲ್ಲರಿಗೂ ಸೋಜಿಗವನ್ನುಂಟು ಮಾಡದಿರದು. ಇನ್ನು ಬಡ ರೈತರಿಗೆ ಔಷಧೋಪಚಾರ ಹೆಚ್ಚಿಸುವುದು, ಗ್ರಾಮೋದ್ಧಾರ ಕೆಲಸಗಳನ್ನು ಕೈಕೊಳ್ಳುವುದು, ದೇಶದ ಎಲ್ಲಾ ಕಡೆ ಪೈವಾಟಕ್ಕೂ ಮತ್ತು ಜನರ ಪ್ರಯಾಣಕ್ಕೂ ತಕ್ಕ ಸಲಕರಣೆಗಳನ್ನು ನಿರ್ಮಿಸುವುದು, ಕೈಗಾರಿಕೆಗಳನ್ನು ಹೆಚ್ಚಿಸುವುದು, ಜನತೆಯ ಆಜ್ಞಾನವನ್ನು ಕಿತ್ತೊಗೆಯಲು ಸೋಪಾನವನ್ನಿಡುವುದು, ರೈಲ್ ಗಾಡಿ ಕೊಡಗಿಗೆ ತರುವುದು, ಕೊಡಗಿನ ತರುಣರಿಗೆ ಪ್ರೌಢ ವಿದ್ಯಾಭ್ಯಾಸದ ಸಲಕರಣೆ ಮಾಡುವುದು, ರೈತರಿಗೆ ಹೊಸ ತರಹದ ಕೃಷಿ ವೃತ್ತಿಯನ್ನು ಕಲ್ಪಿಸುವುದು, ನ್ಯಾಯಸಾಯಕ್ಕೆ ತಕ್ಕಂತೆ ನೀರು ಹಾಯಿಸುವ ಪ್ರಯತ್ನ ಮತ್ತು ಇನ್ನನೇಕ ತರಹದ ಜನಹಿತಕರವಾದ ಕೆಲಸವನ್ನು ರಾಜ್ಯಾಂಗದ ಖರ್ಚು ಕಳೆದು ಉಳಿಯುವ ಎರಡೋ ಅಧವಾ ಎರಡುವರೆ ಲಕ್ಷ ರೂಪಾಯಿಯಿಂದ ಹೇಗೆ ತಾನೇ ಕೈಕೊಂಡಾರು? ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರವೀಯದಿದ್ದಲ್ಲು ಮುಂದಾಳುಗಳು ಕೊಡಗನ್ನು ಪ್ರತ್ಯೇಕವಿರಿಸಿಕೊಳ್ಳಲು ಮೂಡುವ ಪ್ರಯತ್ನಗಳಿಗೆ ಪೆಣ್ಣು ಹಾಕಬೇಕಾಗಿ ಜನರಲ್ಲಿ ನನ್ನ ದೊಡ್ಡ ಹೃದಯಪೂರ್ವಕವಾದ ಕೋರಿಕೆ.

[ಸಶೇಷ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಪೀನತೆಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52-25 ಬೆಂಗಳೂರು ಸಿಟಿ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಪೂರ ಕಂಪನಿ ರವಿ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52–1) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಕಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯುವಂತಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತವ್ಯನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು.
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.
ಶನಿವಾರಸಂತೆ—ಮೆ. ಅಪ್ಪಚೆಟ್ಟೊಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪ್ರಭಪ್ಪಣ್ಣನವರು.

ಸೂಚನೆ.— ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ [illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52–40

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯಶಾಲೆಯು ಕಾಯಿಲಸ್ಥರನು ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲು ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಈಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

22 ಸಿ. ಹೆಚ್. ರಾಘವಣ್ಣ ವೈದ್ಯರ್.

ಸೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮೂ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಭಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,800	0	0
ಜಮೂಬಂದ ಠೇವಣಾತಿ	– 2,44,140	6	4
ವಸೂಲಾದ ಕ್ಷೇಮನಿಧಿ	– 1,36,525	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 16,753	1	11
ತ್ರಿಪ್ಟ್ ಡಿಪಾಜಿಟ್ಟು	– 35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ.?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಲೇಕೆ ಟಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ
ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸ್ನೇಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಶೆಯ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ ಶಾಖೆಗಳೂ ಇಂಡಿಯಾವಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

52-40

Printed & Published by P. I. Belliappa, at 'Kodagu' Press Mercara for 'Kodagu' Ltd.